Re.No. D. 221

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

| | |
|---|---|
| **भाग IX** | **अनुभाग 1** |
| **PART IX** | **SECTION 1** |
| ಭಾಗ **IX** | ವಿಭಾಗ 1 |

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं 1, नई दिल्ली, गुरूवार, नवंबर 11, 2021 | कार्तिका 07, 1943 (शक) | खंड. 51 |
| No.1 New Delhi, Thursday, November 11, 2021 | Kartika 07, 1943 (Saka) | Vol. 51 |
| ಸಂ.1 ನವ ದೆಹಲಿ, ಗುರುವಾರ, ನವೆಂಬರ್ ೧೧, ೨೦೨೧ | ಕಾರ್ತಿಕ ೦೭, ೧೯೪೩ (ಶಕ) | ಸಂಪುಟ. 51 |


**Ministry of Law and Justice**
(Legislative Department)
New Delhi, 11th November, 2021

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 11ನೇ ನವೆಂಬರ್, 2021**

The Translation in Kannada of the following Act, namely:- (1) The Passports Act, 1967 (Act No. 15 of 1967) (2) The Slum Areas (Improvement and clearance) Act, 1956 (Act No. 96 of 1956) (3) The Prasar Bharati (Broadcasting Corporation of India) Act, 1990 (Act No. 25 of 1990) (4) The National Security Guard Act, 1986 (Act No. 47 of 1986) (5) The Rights of Persons with Disabilities Act, 2016 (Act No. 49 of 2016) (6) The Agricultural and Processed Food Products Export Development Authority Act, 1985 (Act No. 2 of 1986) (7) The Child And Adolescent Labour (Prohibition And Regulation) Act, 1986 (Act No. 61 Of 1986) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಪಾಸ್‌ಪೋರ್ಟ್ ಅಧಿನಿಯಮ, 1967 (1967ರ ಅಧಿನಿಯಮ ಸಂಖ್ಯೆ 15) (2) ಕೊಳೆಗೇರಿಗಳ (ಸುಧಾರಣೆ ಮತ್ತು ತೆರವು) ಅಧಿನಿಯಮ, 1956 (1956ರ ಅಧಿನಿಯಮ ಸಂಖ್ಯೆ 96) (3) ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಅಧಿನಿಯಮ, 1990 (1990ರ ಅಧಿನಿಯಮ ಸಂಖ್ಯೆ 25) (4) ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986 (1986ರ ಅಧಿನಿಯಮ ಸಂಖ್ಯೆ 47) (5) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016 (2016ರ ಅಧಿನಿಯಮ ಸಂಖ್ಯೆ 49) (6) ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ((1986ರ ಅಧಿನಿಯಮ ಸಂಖ್ಯೆ 2) (7) ಮಕ್ಕಳು ಮತ್ತು ತರುಣರ ದುಡಿಮೆ (ನಿಷೇಧ ಮತ್ತು ನಿಯಂತ್ರಣ) ಅಧಿನಿಯಮ, 1986 (1986ರ ಅಧಿನಿಯಮ ಸಂಖ್ಯೆ 61)- ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಅಧಿನಿಯಮ, 1990

**(1990ರ ಅಧಿನಿಯಮ ಸಂಖ್ಯೆ 25)**

[ಸೆಪ್ಟೆಂಬರ್ 12, 1990.]

ಪ್ರಸಾರ ಭಾರತಿ ಎಂದು ಕರೆಯಲಾಗುವ, ಭಾರತ ಪ್ರಸಾರಣ ನಿಗಮವನ್ನು ಸ್ಥಾಪಿಸಿ, ಅದು ತನ್ನ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಪರಿಭಾಷಿಸುವುದನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಅನುಷಂಗಿಕವಾದ ವಿಷಯಗಳನ್ನು ಉಪಬಂಧಿಸುವ ಅಧಿನಿಯಮ.

ಅದು, ಭಾರತ ಗಣರಾಜ್ಯದ ನಲವತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ I

## ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಅಧಿನಿಯಮ, 1990 ಎಂದು ಕರೆಯತಕ್ಕದ್ದು.

(2) ಅದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಅದು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು * ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಆಕಾಶವಾಣಿ" ಎಂದರೆ, ಗೊತ್ತುಪಡಿಸಿದ ದಿನದ ನಿಕಟಪೂರ್ವದಲ್ಲಿ ಯಾವುದೇ ಹೆಸರಿನಿಂದ ಕರೆಯಲಾಗುತ್ತಿದ್ದ ಯಾವ ಕಚೇರಿಗಳು, ನಿಲಯಗಳು ಮತ್ತು ಇತರ ಕಾರ್ಯಸಂಸ್ಥೆಗಳು ವಾರ್ತಾ ಮತ್ತು ಪ್ರಸಾರಣ ಒಕ್ಕೂಟ ಮಂತ್ರಾಲಯದ ಆಲ್ ಇಂಡಿಯಾ ರೇಡಿಯೋದ ಭಾಗವಾಗಿದ್ದವೋ ಅಥವಾ ಮಹಾನಿರ್ದೇಶಕರ ಅಧೀನದಲ್ಲಿದ್ದವೋ ಅವುಗಳು ಎಂದು ಅರ್ಥ;

(ಬಿ) "ಗೊತ್ತುಪಡಿಸಿದ ದಿನ" ಎಂದರೆ, 3ನೇ ಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕ ಎಂದು ಅರ್ಥ;

(ಸಿ) "ಪ್ರಸಾರಣ" ಎಂದರೆ, ಬಾಹ್ಯಕಾಶದ ಮೂಲಕ ಅಥವಾ ಮರು ಪ್ರಸಾರ ಕೇಂದ್ರಗಳ ಮಾಧ್ಯಮದ ಮೂಲಕ ನೇರವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಸಾರ್ವಜನಿಕರು ಪಡೆಯಬೇಕೆಂದು ಉದ್ದೇಶಿಸಿದ ಕೇಬಲ್‌ಗಳ ಮೂಲಕ ವಿದ್ಯುತ್ಕಾಂತೀಯ ತರಂಗಗಳ ಪ್ರಸಾರಣದ ಮೂಲಕ ಎಲ್ಲ ಬಗೆಯ ಚಿಹ್ನೆಗಳು, ಸಂಕೇತಗಳು, ಬರಹಗಳು, ಚಿತ್ರಗಳು, ಪ್ರತಿಬಿಂಬಗಳು ಮತ್ತು ಧ್ವನಿಗಳಂತಹ ಸಂಪರ್ಕದ ಯಾವುದೇ ರೀತಿಯ ಪ್ರಸಾರ ಎಂದು ಅರ್ಥ ಮತ್ತು ಅದರ ಎಲ್ಲ ವ್ಯಾಕರಣ ವ್ಯತ್ಯಾಸಗಳನ್ನು ಮತ್ತು ಸಜಾತೀಯ ಪದಾವಳಿಗಳನ್ನು ಅದಕ್ಕನುಸಾರವಾಗಿ ಅರ್ಥೈಸತಕ್ಕದ್ದು;

(ಡಿ) "ಮಂಡಲಿ" ಎಂದರೆ, ಪ್ರಸಾರ ಭಾರತಿ ಮಂಡಲಿ ಎಂದು ಅರ್ಥ;

(ಇ) "ಪ್ರಸಾರಣ ಪರಿಷತ್ತು" ಎಂದರೆ, 14ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಪರಿಷತ್ತು ಎಂದು ಅರ್ಥ;

---

* 15ನೇ ಸೆಪ್ಟೆಂಬರ್ 1997ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂ. ಎಸ್.ಓ 509 (ಇ) ಜುಲೈ 22, 1997, ಭಾರತ ಸರ್ಕಾರದ ವಿಶೇಷ ಗೆಜೆಟ್ ಭಾಗ II ವಿಭಾಗ 3(ii) ನೋಡಿ.

(ಎಫ್) "ಅಧ್ಯಕ್ಷ" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ನಿಗಮದ ಅಧ್ಯಕ್ಷ ಎಂದು ಅರ್ಥ;

(ಜಿ) "ನಿಗಮ" ಎಂದರೆ, 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಎಂದು ಅರ್ಥ;

(ಹೆಚ್) "ದೂರದರ್ಶನ" ಎಂದರೆ, ಗೊತ್ತುಪಡಿಸಿದ ದಿನದ ನಿಕಟಪೂರ್ವದಲ್ಲಿ ಯಾವುದೇ ಹೆಸರಿನಿಂದ ಕರೆಯಲಾಗುವ ಯಾವ ಕಚೇರಿಗಳು, ಕೇಂದ್ರಗಳು ಮತ್ತು ಇತರ ಕಾರ್ಯಸಂಸ್ಥೆಗಳು, ವಾರ್ತಾ ಮತ್ತು ಪ್ರಸಾರಣ ಒಕ್ಕೂಟ ಮಂತ್ರಾಲಯದ ದೂರದರ್ಶನದ ಭಾಗವಾಗಿದ್ದವೋ ಅಥವಾ ಮಹಾನಿರ್ದೇಶಕರ ಅಧೀನದಲ್ಲಿದ್ದವೋ ಅವುಗಳು ಎಂದು ಅರ್ಥ;

(ಐ) "ಚುನಾಯಿತ ಸದಸ್ಯ" ಎಂದರೆ, 3ನೇ ಪ್ರಕರಣದ ಮೇರೆಗೆ ಚುನಾಯಿತನಾದ ಸದಸ್ಯ ಎಂದು ಅರ್ಥ;

(ಜೆ) "ಕಾರ್ಯನಿರ್ವಾಹಕ ಸದಸ್ಯ" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕಾರ್ಯನಿರ್ವಾಹಕ ಸದಸ್ಯ ಎಂದು ಅರ್ಥ;

(ಕೆ) "ಕೇಂದ್ರ" ಎಂದರೆ, ಸ್ಟುಡಿಯೋಗಳನ್ನು ಅಥವಾ ವಾಹಕಗಳನ್ನು ಅಥವಾ ಅವೆರಡನ್ನು ಹೊಂದಿರುವ ಯಾವುದೇ ದೂರದರ್ಶನ ಪ್ರಸಾರ ಮಾಡುವ ಕೇಂದ್ರ ಎಂದು ಅರ್ಥ ಮತ್ತು ಅದು ಮರು ಪ್ರಸಾರ ಕೆಂದ್ರವನ್ನು ಒಳಗೊಳ್ಳುತ್ತದೆ;

(ಎಲ್) "ಸದಸ್ಯ" ಎಂದರೆ, ಮಂಡಲಿಯ ಸದಸ್ಯ ಎಂದು ಅರ್ಥ;

(ಎಂ) "ಸದಸ್ಯ (ಹಣಕಾಸು)" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸದಸ್ಯ (ಹಣಕಾಸು) ಎಂದು ಅರ್ಥ;

(ಎನ್) "ಸದಸ್ಯ (ಸಿಬ್ಬಂದಿ) ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸದಸ್ಯ (ಸಿಬ್ಬಂದಿ) ಎಂದು ಅರ್ಥ;

(ಓ) "ನಾಮನಿರ್ದೇಶಿತ ಸದಸ್ಯ" ಎಂದರೆ 3ನೇ ಪ್ರಕರಣದ ಮೇರೆಗೆ ವಾರ್ತಾ ಮತ್ತು ಪ್ರಸಾರಣ ಒಕ್ಕೂಟ ಮಂತ್ರಾಲಯವು ನಾಮನಿರ್ದೇಶಿಸಿದ ಸದಸ್ಯ ಎಂದು ಅರ್ಥ;

(ಪಿ) "ಖರ್ಚು ಮಾಡಲೇಬೇಕಾದ ನಿಧಿ" ಎಂದರೆ, ಕೆಲವು ಯೋಜನೆಗಳ ವೆಚ್ಚವನ್ನು ಭರಿಸುವುದಕ್ಕೆ ಆಕಾಶವಾಣಿ ಮತ್ತು ದೂರದರ್ಶನದ ವಾಣಿಜ್ಯ ರಾಜಸ್ವಗಳಿಂದ ಸೃಜಿಸಿದ ನಿಧಿ ಎಂದು ಅರ್ಥ;

(ಕ್ಯೂ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ ಎಂದು ಅರ್ಥ;

(ಆರ್) "ಅರೆಕಾಲಿಕ ಸದಸ್ಯ" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ಮಂಡಲಿಯ ಅರೆಕಾಲಿಕ ಸದಸ್ಯ ಎಂದು ಅರ್ಥ, ಆದರೆ ಇದರಲ್ಲಿ ಪದನಿಮಿತ್ತ ಸದಸ್ಯನು ನಾಮನಿರ್ದೇಶಿತ ಸದಸ್ಯನು ಅಥವಾ ಚುನಾಯಿತ ಸದಸ್ಯನು ಒಳಗೊಳ್ಳುವುದಿಲ್ಲ;

(ಎಸ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಟಿ) "ನೌಕರಿಭರ್ತಿ ಮಂಡಲಿ" ಎಂದರೆ, 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ಮಂಡಲಿ ಎಂದು ಅರ್ಥ;

(ಯು) "ವಿನಿಯಮನಗಳು" ಎಂದರೆ, ಈ ಅಧಿನಿಯಮದ ಮೇರೆಗೆ ನಿಗಮವು ರಚಿಸಿದ ವಿನಿಯಮನಗಳು ಎಂದು ಅರ್ಥ;

(ವಿ) "ನಿಲಯ" ಎಂದರೆ, ಸ್ಟುಡಿಯೋಗಳನ್ನು ಅಥವಾ ವಾಹಕಗಳನ್ನು ಅಥವಾ ಅವೆರಡನ್ನು ಹೊಂದಿರುವ ಯಾವುದೇ ಪ್ರಸಾರಣ ಕೇಂದ್ರ ಎಂದು ಅರ್ಥ ಮತ್ತು ಅದು ಮರು ಪ್ರಸಾರ ಕೇಂದ್ರವನ್ನು ಒಳಗೊಳ್ಳುತ್ತದೆ;

(ಡಬ್ಲ್ಯೂ) "ಪೂರ್ಣಕಾಲಿಕ ಸದಸ್ಯ" ಎಂದರೆ, ಕಾರ್ಯನಿರ್ವಾಹಕ ಸದಸ್ಯ, ಸದಸ್ಯ (ಹಣಕಾಸು) ಅಥವಾ ಸದಸ್ಯ (ಸಿಬ್ಬಂದಿ) ಎಂದು ಅರ್ಥ;

(ಎಕ್ಸ್) "ವರ್ಷ" ಎಂದರೆ, ಹಣಕಾಸು ವರ್ಷ ಎಂದು ಅರ್ಥ.

## ಅಧ್ಯಾಯ II

### ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ)

3. **ನಿಗಮದ ಸ್ಥಾಪನೆ ಮತ್ತು ರಚನೆ.**– (1) ಕೇಂದ್ರ ಸರ್ಕಾರವು ಈ ಬಗ್ಗೆ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ಎಂಬ ಹೆಸರಿನ ಒಂದು ನಿಗಮವನ್ನು ಸ್ಥಾಪಿಸತಕ್ಕದ್ದು.

(2) ನಿಗಮವು, ಮೇಲೆ ಹೇಳಿದ ಹೆಸರುಳ್ಳ, ಶಾಶ್ವತ ಉತ್ತರಾಧಿಕಾರವನ್ನು ಮತ್ತು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವ, ಹೊಂದುವ ಮತ್ತು ವಿಲೆ ಮಾಡುವ ಮತ್ತು ಕರಾರನ್ನು ಮಾಡಿಕೊಳ್ಳುವ ಅಧಿಕಾರದೊಂದಿಗೆ ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು, ಮತ್ತು ಅದು ಸದರಿ ಹೆಸರಿನಲ್ಲಿ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ನಿಗಮದ ಕೇಂದ್ರ ಕಾರ್ಯಸ್ಥಾನವು ನವದೆಹಲಿಯಲ್ಲಿರತಕ್ಕದ್ದು ಮತ್ತು ನಿಗಮವು ಭಾರತದ ಇತರ ಸ್ಥಳಗಳಲ್ಲಿ ಮತ್ತು, ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ, ಭಾರತದ ಹೊರಗಡೆ ಕಚೇರಿಗಳನ್ನು, ಕೇಂದ್ರಗಳನ್ನು ಅಥವಾ ನಿಲಯಗಳನ್ನು ಸ್ಥಾಪಿಸಬಹುದು.

(4) ನಿಗಮದ ವ್ಯವಹಾರಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯು ಪ್ರಸಾರ ಭಾರತಿ ಮಂಡಲಿಯಲ್ಲಿ ನಿಹಿತವಾಗಿರತಕ್ಕದ್ದು. ಅದು ಈ ಅಧಿನಿಯಮದ ಮೇರೆಗೆ ನಿಗಮವು ಚಲಾಯಿಸಬಹುದಾದ ಅಥವಾ ಮಾಡಬಹುದಾದ ಅಂತಹ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಅಂತಹ ಎಲ್ಲ ಕೃತ್ಯಗಳನ್ನು ಮತ್ತು ಕಾರ್ಯಗಳನ್ನು ಮಾಡಬಹುದು.

(5) ಮಂಡಲಿಯು,–

(ಎ) ಅಧ್ಯಕ್ಷನನ್ನು;

(ಬಿ) ಒಬ್ಬ ಕಾರ್ಯನಿರ್ವಾಹಕ ಸದಸ್ಯನನ್ನು;

(ಸಿ) ಒಬ್ಬ ಸದಸ್ಯನನ್ನು (ಹಣಕಾಸು);

(ಡಿ) ಒಬ್ಬ ಸದಸ್ಯನನ್ನು (ಸಿಬ್ಬಂದಿ);

(ಇ) ಆರು ಅರೆಕಾಲಿಕ ಸದಸ್ಯರನ್ನು;

(ಎಫ್) ಮಹಾನಿರ್ದೇಶಕರನ್ನು (ಆಕಾಶವಾಣಿ), ಪದನಿಮಿತ್ತ;

(ಜಿ) ಮಹಾನಿರ್ದೇಶಕರನ್ನು (ದೂರದರ್ಶನ), ಪದನಿಮಿತ್ತ;

(ಹೆಚ್) ವಾರ್ತಾ ಮತ್ತು ಪ್ರಸಾರಣ ಒಕ್ಕೂಟ ಮಂತ್ರಾಲಯವು ನಾಮನಿರ್ದೇಶಿಸಬೇಕಾದ, ಆ ಮಂತ್ರಾಲಯದ ಒಬ್ಬ ಪ್ರತಿನಿಧಿಯನ್ನು; ಮತ್ತು

(ಐ) ನಿಗಮದ ನೌಕರರ ಇಬ್ಬರು ಪ್ರತಿನಿಧಿಗಳನ್ನು, ಅವರಲ್ಲಿ ಒಬ್ಬರನ್ನು ಇಂಜಿನಿಯರಿಂಗ್ ಸಿಬ್ಬಂದಿಯೊಳಗಿಂದ ಚುನಾಯಿಸತಕ್ಕದ್ದು ಮತ್ತು ಒಬ್ಬರನ್ನು ಇತರ ನೌಕರರೊಳಗಿಂದ ಚುನಾಯಿಸತಕ್ಕದ್ದು

– ಒಳಗೊಂಡಿರತಕ್ಕದ್ದು.

(6) ನಿಗಮವು, ತನ್ನ ಪ್ರಕಾರ್ಯಗಳನ್ನು, ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ದಕ್ಷತೆಯಿಂದ ನೆರವೇರಿಸಲು, ಚಲಾಯಿಸಲು ಮತ್ತು ನಿರ್ವಹಿಸಲು ಅವಶ್ಯವೆನಿಸಬಹುದಾದಂಥ ಸಮಿತಿಗಳನ್ನು ನೇಮಕ ಮಾಡಬಹುದು:

ಪರಂತು, ಪ್ರತಿಯೊಂದು ಸಮಿತಿಯ ಎಲ್ಲ ಅಥವಾ ಬಹುಸಂಖ್ಯಾತ ಸದಸ್ಯರು ಸದಸ್ಯರಾಗಿರತಕ್ಕದ್ದು ಮತ್ತು ಸದಸ್ಯನಾಗಿಲ್ಲದ ಯಾವುದೇ ಅಂತಹ ಸಮಿತಿಯ ಸದಸ್ಯನು ಸಮಿತಿಯ ಸಭೆಗಳಿಗೆ ಹಾಜರಾಗುವ ಮತ್ತು ಅದರ ವ್ಯವಹರಣೆಗಳಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಮಾತ್ರ ಹೊಂದಿರತಕ್ಕದ್ದು, ಆದರೆ ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(7) ನಿಗಮವು, ವಿನಿಯಮನಗಳ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಪಾಲಿಸಲು, ಯಾವ ವ್ಯಕ್ತಿಯ ನೆರವು ಅಥವಾ ಸಲಹೆಯು ತನಗೆ ಅಗತ್ಯವೆಂದು ಬಯಸುವುದೋ ಆ ವ್ಯಕ್ತಿಯೊಂದಿಗೆ ಸಹವರ್ತಿಯಾಗಬಹುದು ಮತ್ತು ಹಾಗೆ ಸಹವರ್ತಿಯಾದ ವ್ಯಕ್ತಿಯು ಯಾವ ಉದ್ದೇಶಗಳಿಗಾಗಿ ಅವನು ಸಹವರ್ತಿಯಾಗಿದ್ದನೋ ಆ ಉದ್ದೇಶಗಳಿಗೆ ಸುಸಂಬದ್ಧವಾಗುವಂತೆ ಮಂಡಲಿಯ ಚರ್ಚೆಗಳಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು, ಆದರೆ ಮತಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(8) ಮಂಡಲಿಯ ಅಥವಾ (6)ನೇ ಉಪಪ್ರಕರಣದ ಮೇರೆಗೆ ಮಂಡಲಿಯು ನೇಮಕ ಮಾಡಿದ ಯಾವುದೇ ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,–

(ಎ) ಮಂಡಲಿಯಲ್ಲಿನ ಅಥವಾ ಅಂತಹ ಸಮಿತಿಯಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಬಿ) ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ಅಥವಾ ಅಂತಹ ಸಮಿತಿಯ ಸದಸ್ಯನ ನೇಮಕದಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕ ಉಂಟು ಮಾಡದ ಮಂಡಲಿಯ ಅಥವಾ ಅಂತಹ ಸಮಿತಿಯ ಪ್ರಕ್ರಿಯೆಯಲ್ಲಿನ ಯಾವುದೇ ಕ್ರಮದೋಷದ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

4. **ಅಧ್ಯಕ್ಷನ ಮತ್ತು ಇತರ ಸದಸ್ಯರ ನೇಮಕ.**– (1) ಪದನಿಮಿತ್ತ ಸದಸ್ಯರನ್ನು, ನಾಮನಿರ್ದೇಶಿತ ಸದಸ್ಯರನ್ನು ಮತ್ತು ಚುನಾಯಿತ ಸದಸ್ಯರನ್ನು ಹೊರತುಪಡಿಸಿ, ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು, –

(ಎ) ರಾಜ್ಯಸಭೆಯ ಸಭಾಪತಿ, – ಅವನು ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಭಾರತ ಪತ್ರಿಕಾ ಪರಿಷತ್ತು ಅಧಿನಿಯಮ, 1978 (1978ರ 37)ರ 4ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತ ಪತ್ರಿಕಾ ಪರಿಷತ್ತಿನ ಅಧ್ಯಕ್ಷ; ಮತ್ತು

(ಸಿ) ಭಾರತದ ರಾಷ್ಟ್ರಪತಿಯಿಂದ ನಾಮನಿರ್ದೇಶಿತನಾದ ಒಬ್ಬ ವ್ಯಕ್ತಿ

– ಇವರನ್ನೊಳಗೊಂಡ ಸಮಿತಿಯ ಶಿಫಾರಸ್ಸಿನ ಮೇಲೆ ಭಾರತದ ರಾಷ್ಟ್ರಪತಿಯು ನೇಮಕಮಾಡತಕ್ಕದ್ದು.

(2) ಸದಸ್ಯರ ಯಾವುದೇ ನೇಮಕವು, (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಸಮಿತಿಯಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

(3) ಅಧ್ಯಕ್ಷನು ಮತ್ತು ಅರೆಕಾಲಿಕ ಸದಸ್ಯರು ಸಾರ್ವಜನಿಕ ಜೀವನದಲ್ಲಿ ಖ್ಯಾತ ವ್ಯಕ್ತಿಗಳಾಗಿರತಕ್ಕದ್ದು; ಕಾರ್ಯನಿರ್ವಾಹಕ ಸದಸ್ಯನು ಆಡಳಿತ, ವ್ಯವಸ್ಥಾಪನೆ, ಪ್ರಸಾರಣ, ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ, ನಾಟಕ ಅಥವಾ ಪತ್ರಿಕೋದ್ಯಮ, ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು; ಸದಸ್ಯನು (ಹಣಕಾಸು) ಹಣಕಾಸಿನ ವಿಷಯಗಳ ಬಗ್ಗೆ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು ಮತ್ತು ಸದಸ್ಯನು (ಸಿಬ್ಬಂದಿ), ಸಿಬ್ಬಂದಿ ವ್ಯವಸ್ಥಾಪನೆ ಮತ್ತು ಆಡಳಿತದ ಬಗ್ಗೆ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಸಮಿತಿಯು ಮಾಡಿದ ಶಿಫಾರಸ್ಸುಗಳು ಈ ಪ್ರಕರಣದ ಮೇರೆಗಿನ ನೇಮಕಗಳ ಉದ್ದೇಶಗಳಿಗೆ ಬಂಧನಕಾರಿಯಾಗಿರತಕ್ಕದ್ದು.

5. **ಕಾರ್ಯನಿರ್ವಾಹಕ ಸದಸ್ಯನ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** ಕಾರ್ಯನಿರ್ವಾಹಕ ಸದಸ್ಯನು ನಿಗಮದ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು ಮತ್ತು ಮಂಡಲಿಯ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟು, ಮಂಡಲಿಯು ಅವನಿಗೆ ಪ್ರತ್ಯಾಯೋಜಿಸಬಹುದಾದಂಥ ಅದರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

6. **ಅಧ್ಯಕ್ಷನ ಮತ್ತು ಇತರ ಸದಸ್ಯರ ಪದಾವಧಿ, ಸೇವಾ ಷರತ್ತುಗಳು, ಇತ್ಯಾದಿ.–** *(1) ಅಧ್ಯಕ್ಷನು ಅರೆಕಾಲಿಕ ಸದಸ್ಯನಾಗಿರತಕ್ಕದ್ದು ಮತ್ತು ಅವನು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಎಪ್ಪತ್ತು ವರ್ಷ ವಯಸ್ಸು ತುಂಬುವವರೆಗೆ, ಇದರಲ್ಲಿ ಯಾವುದು ಮೊದಲೋ, ಅಲ್ಲಿಯವರೆಗೆ ಪದಧಾರಣ ಮಾಡಿರತಕ್ಕದ್ದು.

ಪರಂತು, ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ತಿದ್ದುಪಡಿ ಅಧಿನಿಯಮ, 2008 (2008ರ ಸಂಖ್ಯೆ 12)ರ ಪ್ರಾರಂಭದ ನಿಕಟಪೂರ್ವದಲ್ಲಿ ಅಧ್ಯಕ್ಷನಾಗಿ ಪದಧಾರಣ ಮಾಡಿರುವ ಯಾರೇ ವ್ಯಕ್ತಿಯು, ಆತನ ನೇಮಕವು ಈ ಉಪಪ್ರಕರಣದ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ, ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನದಂದು ಹಾಗೆ ಅಧ್ಯಕ್ಷನಾಗಿ ಪದಧಾರಣ ಮಾಡಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಪದಧಾರಣ ಮಾಡಿರುವುದು ನಿಂತು ಹೋದ ಕಾರಣದಿಂದ ಆತನು ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಸದಸ್ಯನು (ಹಣಕಾಸು) ಮತ್ತು ಸದಸ್ಯನು (ಸಿಬ್ಬಂದಿ) ಪೂರ್ಣಕಾಲಿಕ ಸದಸ್ಯರಾಗಿರತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ಸದಸ್ಯನು, ತಾನು ಪದವನ್ನು ವಹಿಸಿಕೊಂಡ ದಿನಾಂಕದಿಂದ ಆರು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಅರವತ್ತೆರಡು ವರ್ಷ ವಯಸ್ಸು ತುಂಬುವವರೆಗೆ, ಇವುಗಳಲ್ಲಿ ಯಾವುದು ಮೊದಲೋ, ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(2ಎ) ಕಾರ್ಯನಿರ್ವಾಹಕ ಸದಸ್ಯನು ಪೂರ್ಣಕಾಲಿಕ ಸದಸ್ಯನಾಗಿರತಕ್ಕದ್ದು ಮತ್ತು ಅವನು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಅರವತ್ತೈದು ವರ್ಷ ವಯಸ್ಸು ತುಂಬುವವರೆಗೆ, ಇದರಲ್ಲಿ ಯಾವುದು ಮೊದಲೋ, ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು, ಪ್ರಸಾರ ಭಾರತಿ (ಭಾರತ ಪ್ರಸಾರಣ ನಿಗಮ) ತಿದ್ದುಪಡಿ ಅಧಿನಿಯಮ, 2008ರ ಪ್ರಾರಂಭದ ನಿಕಟಪೂರ್ವದಲ್ಲಿ ಕಾರ್ಯನಿರ್ವಾಹಕ ಸದಸ್ಯನಾಗಿ ಪದಧಾರಣ ಮಾಡಿರುವ ಯಾರೇ ವ್ಯಕ್ತಿಯು, ಆತನ ನೇಮಕವು ಈ ಉಪಪ್ರಕರಣದ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ, ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನದಂದು ಹಾಗೆ ಕಾರ್ಯನಿರ್ವಾಹಕ ಸದಸ್ಯನಾಗಿ ಪದಧಾರಣ ಮಾಡಿರುವುದು ನಿಂತು ಹೋದ ಕಾರಣದಿಂದ ಆತನು ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(3) ಅರೆಕಾಲಿಕ ಸದಸ್ಯರ ಪದಾವಧಿಯು ಆರು ವರ್ಷಗಳಾಗಿರತಕ್ಕದ್ದು; ಆದರೆ ಅಂತಹ ಸದಸ್ಯರ ಪೈಕಿ ಮೂರನೇ ಒಂದು ಭಾಗದಷ್ಟು ಸದಸ್ಯರು ಪ್ರತಿ ಎರಡನೇ ವರ್ಷವು ಮುಕ್ತಾಯವಾದ ಮೇಲೆ ನಿವೃತ್ತರಾಗತಕ್ಕದ್ದು.

---

* (1)ನೇ ಉಪಪ್ರಕರಣದ ಬದಲಾಗಿ 2008ರ 12ನೇ ಸಂಖ್ಯೆಯ ಅಧಿನಿಯಮದ 2ನೇ ಉಪಪ್ರಕರಣದ ಮೂಲಕ ಪ್ರತ್ಯಾಯೋಜಿಸಲಾಗಿದೆ.

(4) ಚುನಾಯಿತ ಸದಸ್ಯನ ಪದಾವಧಿಯು, ಎರಡು ವರ್ಷಗಳವರೆಗೆ ಅಥವಾ ಅವನು ನಿಗಮದ ನೌಕರನಾಗಿರುವುದು ನಿಂತು ಹೋಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಇರತಕ್ಕದ್ದು.

(5) ನಿಗಮವು ಸ್ಥಾಪನೆಯಾದ ನಂತರ ಸಾಧ್ಯವಾದಷ್ಟು ಬೇಗನೆ, ಭಾರತದ ರಾಷ್ಟ್ರಪತಿಯು, ಆದೇಶದ ಮೂಲಕ, ಅರೆಕಾಲಿಕ ಸದಸ್ಯರೆಂದು ಹಾಗೆ ಪದ ಧಾರಣ ಮಾಡಿದ ಸದಸ್ಯರ ಪೈಕಿ ಮೂರನೇ ಒಂದು ಭಾಗದಷ್ಟು ಸದಸ್ಯರು ಆ ತರುವಾಯ ಪ್ರತಿ ಎರಡು ವರ್ಷಕ್ಕೊಮ್ಮೆ ನಿವೃತ್ತಿ ಹೊಂದತಕ್ಕದ್ದೆಂಬ ದೃಷ್ಟಿಯಿಂದ ಅರೆಕಾಲಿಕ ಸದಸ್ಯರ ಪೈಕಿ ಕೆಲವು ಸದಸ್ಯರ ಪದಾವಧಿಯನ್ನು ಮೊಟಕುಗೊಳಿಸುವುದಕ್ಕೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಉಪಬಂಧವನ್ನು ರಚಿಸಬಹುದು.

(6) ಅಧ್ಯಕ್ಷನ ಪದವನ್ನು ಹೊಂದಿರುವ ವ್ಯಕ್ತಿಯ ಅಥವಾ ಯಾರೇ ಇತರ ಸದಸ್ಯನ ಪದಾವಧಿಯ ಮುಕ್ತಾಯಕ್ಕೆ ಮುಂಚೆ, ಯಾವುದೇ ಕಾರಣಕ್ಕಾಗಿ ಖಾಲಿಸ್ಥಾನವು ಉಂಟಾದಲ್ಲಿ, ಅಂತಹ ಖಾಲಿಸ್ಥಾನವನ್ನು ಆಕಸ್ಮಿಕ ಖಾಲಿ ಸ್ಥಾನವೆಂಬುದಾಗಿ ಭಾವಿಸತಕ್ಕದ್ದು ಮತ್ತು ಅಂತಹ ಖಾಲಿಸ್ಥಾನವನ್ನು ಭರ್ತಿಮಾಡಲು ನೇಮಕಗೊಂಡ ಅಥವಾ ಚುನಾಯಿತನಾದ ವ್ಯಕ್ತಿಯು, ಅಂತಹ ಖಾಲಿಸ್ಥಾನವು ಉಂಟಾಗಿರದಿದ್ದರೆ ಅವನ ಪದದಲ್ಲಿನ ಪೂರ್ವಾಧಿಕಾರಿಯು ಪದಧಾರಣ ಮಾಡಬಹುದಾಗಿದ್ದ, ಮುಕ್ತಾಯವಾಗದೆ ಉಳಿದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(7) ಪೂರ್ಣಕಾಲಿಕ ಸದಸ್ಯರು ನಿಗಮದ ನೌಕರರಾಗಿರತಕ್ಕದ್ದು ಮತ್ತು ಸಂಬಳಗಳಿಗೆ ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ರಜೆ, ನಿವೃತ್ತಿ ವೇತನ (ಯಾವುದಾದರೂ ಇದ್ದರೆ), ಭವಿಷ್ಯ ನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂಥ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಸಂಬಳಗಳನ್ನು ಮತ್ತು ಭತ್ಯೆಗಳನ್ನು ಮತ್ತು ಸೇವಾ ಷರತ್ತುಗಳನ್ನು ಅವರ ನೇಮಕದ ನಂತರ ಅವರಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ಥಗೊಳಿಸತಕ್ಕದ್ದಲ್ಲ.

(8) ಅಧ್ಯಕ್ಷನು ಮತ್ತು ಅರೆಕಾಲಿಕ ಸದಸ್ಯರು ನಿಯಮಿಸಬಹುದಾದಂತಹ ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

7. **ಅಧ್ಯಕ್ಷನನ್ನು ಮತ್ತು ಸದಸ್ಯರನ್ನು ತೆಗೆದುಹಾಕುವುದು ಮತ್ತು ಅಮಾನತಿನಲ್ಲಿ ಇಡುವುದು.**– (1) (3)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪದನಿಮಿತ್ತ ಸದಸ್ಯನನ್ನು, ನಾಮನಿರ್ದೇಶಿತ ಸದಸ್ಯನನ್ನು ಮತ್ತು ಚುನಾಯಿತ ಸದಸ್ಯನನ್ನು ಹೊರತುಪಡಿಸಿ, ಅಧ್ಯಕ್ಷನನ್ನು ಅಥವಾ ಯಾರೇ ಇತರ ಸದಸ್ಯನನ್ನು, ಭಾರತದ ರಾಷ್ಟ್ರಪತಿಯು ಸರ್ವೋಚ್ಚ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖದ ಮೇರೆಗೆ, ಸರ್ವೋಚ್ಚ ನ್ಯಾಯಾಲಯವು ನಿಯಮಗಳ ಮೂಲಕ ಉಪಬಂಧಿಸಬಹುದಾದಂತಹ ಪ್ರಕ್ರಿಯೆಗನುಸಾರವಾಗಿ ವಿಚಾರಣೆಯನ್ನು ನಡೆಸಿ, ದುರ್ವರ್ತನೆಯ ಕಾರಣದ ಮೇಲೆ, ಸಂದರ್ಭಾನುಸಾರ, ಆ ಅಧ್ಯಕ್ಷನನ್ನು ಅಥವಾ ಅಂತಹ ಇತರ ಸದಸ್ಯನನ್ನು ತೆಗೆದುಹಾಗಬೇಕೆಂದು ವರದಿ ಮಾಡಿದ ನಂತರ, ಅಂತಹ ಕಾರಣದ ಮೇಲೆ ರಾಷ್ಟ್ರಪತಿಯ ಆದೇಶದ ಮೂಲಕ ಮಾತ್ರ ಅವನನ್ನು ಪದದಿಂದ ತೆಗೆದುಹಾಕತಕ್ಕದ್ದು.

(2) ರಾಷ್ಟ್ರಪತಿಯು, ಪದನಿಮಿತ್ತ ಸದಸ್ಯನನ್ನು, ನಾಮನಿರ್ದೇಶಿತ ಸದಸ್ಯನನ್ನು ಅಥವಾ ಚುನಾಯಿತ ಸದಸ್ಯನನ್ನು ಹೊರತುಪಡಿಸಿ, ಅಧ್ಯಕ್ಷನನ್ನು ಅಥವಾ ಇತರ ಸದಸ್ಯನನ್ನು, (1)ನೇ ಉಪಪ್ರಕರಣದ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಯಾರಿಗೆ ಸಂಬಂಧಿಸಿದಂತೆ ಉಲ್ಲೇಖವನ್ನು ಮಾಡಲಾಗಿದೆಯೋ, ಅವರಿಗೆ ಸಂಬಂಧಿಸಿದಂತೆ ಅಂಥ ಉಲ್ಲೇಖದ ಮೇಲೆ ಸರ್ವೋಚ್ಚ ನ್ಯಾಯಾಲಯದ ವರದಿಯನ್ನು ಸ್ವೀಕರಿಸಿದ ನಂತರ ರಾಷ್ಟ್ರಪತಿಯು ಆದೇಶವನ್ನು ಮಾಡುವವರೆಗೆ, ಪದದಿಂದ ಅಮಾನತುಗೊಳಿಸಬಹುದು.

(3) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಾಷ್ಟ್ರಪತಿಯು, ಆದೇಶದ ಮೂಲಕ, ಅಧ್ಯಕ್ಷನು ಅಥವಾ ಯಾರೇ ಪೂರ್ಣಕಾಲಿಕ ಸದಸ್ಯನು,–

(ಎ) ಭಾರತದ ನಾಗರಿಕನಾಗಿರುವುದು ನಿಂತುಹೋಗಿದ್ದರೆ; ಅಥವಾ

(ಬಿ) ದಿವಾಳಿಯೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(ಸಿ) ತನ್ನ ಪದಾವಧಿಯಲ್ಲಿ, ತನ್ನ ಪದದ ಕರ್ತವ್ಯಗಳನ್ನು ಹೊರತುಪಡಿಸಿ ಹೊರಗಿನ ಯಾವುದೇ ವೇತನ ಪಡೆಯುವ ಉದ್ಯೋಗದಲ್ಲಿ ನಿರತನಾಗಿದ್ದರೆ; ಅಥವಾ

(ಡಿ) ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(ಇ) ರಾಷ್ಟ್ರಪತಿಯ ಅಭಿಪ್ರಾಯದಲ್ಲಿ, ದೈಹಿಕ ಅಥವಾ ಮಾನಸಿಕ ದೌರ್ಬಲ್ಯದ ಕಾರಣಕ್ಕಾಗಿ ಪದದಲ್ಲಿ ಮುಂದುವರಿಯಲು ಅಸಮರ್ಥನಾಗಿದ್ದರೆ

– ಅಂತಹ ಅಧ್ಯಕ್ಷನನ್ನು ಅಥವಾ ಅಂಥ ಪೂರ್ಣಕಾಲಿಕ ಸದಸ್ಯನನ್ನು ಅವನ ಪದದಿಂದ ತೆಗೆದುಹಾಕಬಹುದು:

ಪರಂತು, ರಾಷ್ಟ್ರಪತಿಯು, ಆದೇಶದ ಮೂಲಕ, ಯಾರೇ ಅರೆಕಾಲಿಕ ಸದಸ್ಯನು ದಿವಾಳಿ ಎಂದು ನ್ಯಾಯನಿರ್ಣೀತನಾಗಿದ್ದರೆ ಅಥವಾ ಅವನು ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಅಥವಾ ರಾಷ್ಟ್ರಪತಿಯ ಅಭಿಪ್ರಾಯದಲ್ಲಿ, ದೈಹಿಕ ಅಥವಾ ಮಾನಸಿಕ ದೌರ್ಬಲತೆಯ ಕಾರಣಕ್ಕಾಗಿ ಪದದಲ್ಲಿ ಮುಂದುವರಿಯಲು ಅಸಮರ್ಥನಾಗಿದ್ದರೆ, ಆತನನ್ನು ಅವನ ಪದದಿಂದ ತೆಗೆದು ಹಾಕಬಹುದು.

(4) ಯಾರೇ ಪದನಿಮಿತ್ತ ಸದಸ್ಯನನ್ನು, ನಾಮನಿರ್ದೇಶಿತ ಸದಸ್ಯನನ್ನು ಅಥವಾ ಯಾರೇ ಚುನಾಯಿತ ಸದಸ್ಯನನ್ನು ಹೊರತುಪಡಿಸಿ, ಅಧ್ಯಕ್ಷನು ಅಥವಾ ಯಾರೇ ಪೂರ್ಣಕಾಲಿಕ ಸದಸ್ಯನು, ನಿಗಮದ ಅಥವಾ ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಒಪ್ಪಂದದಲ್ಲಿ ಯಾವುದೇ ರೀತಿಯಲ್ಲಿ ಸಂಬಂಧವನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ ಅಥವಾ ಹೊಂದಿರುತ್ತಿದ್ದರೆ ಸದಸ್ಯನಾಗಿ ಅಲ್ಲದೆ ಅದರ ಯಾವುದೇ ಲಾಭದಲ್ಲಿ ಅಥವಾ ಅದರಿಂದ ಉಂಟಾಗುವ ಯಾವುದೇ ಪ್ರಯೋಜನದಲ್ಲಿ ಅಥವಾ ಉಪಲಬ್ಧಿಯಲ್ಲಿ ಮತ್ತು ನಿಗಮಿತ ಕಂಪನಿಯ ಇತರ ಸದಸ್ಯರೊಂದಿಗೆ ಸಾಮಾನ್ಯವಾಗಿ ಯಾವುದೇ ರೀತಿಯಲ್ಲಿ ಭಾಗವಹಿಸಿದರೆ, ಅವನನ್ನು (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ದುರ್ವರ್ತನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

(5) ಅರೆಕಾಲಿಕ ಸದಸ್ಯನು, ನಿಗಮದ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಒಪ್ಪಂದದಲ್ಲಿ ಯಾವುದೇ ರೀತಿಯಲ್ಲಿ ಸಂಬಂಧವನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ ಅಥವಾ ಹೊಂದಿರುತ್ತಿದ್ದರೆ, ಅವನನ್ನು (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ದುರ್ವರ್ತನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

(6) ಅಧ್ಯಕ್ಷನು ಅಥವಾ ಯಾರೇ ಇತರ ಸದಸ್ಯನು, ಭಾರತದ ರಾಷ್ಟ್ರಪತಿಗೆ ಲಿಖಿತ ನೋಟೀಸನ್ನು ನೀಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂತಹ ರಾಜೀನಾಮೆಯು ಅಂಗೀಕೃತವಾದ ಮೇಲೆ, ಅಧ್ಯಕ್ಷನು ಅಥವಾ ಇತರ ಸದಸ್ಯನು ತನ್ನ ಪದವನ್ನು ತೆರವುಗೊಳಿಸಿದ್ದಾನೆಂದು ಭಾವಿಸತಕ್ಕದ್ದು.

**8. ಮಂಡಲಿಯ ಸಭೆಗಳು.**– (1) ಮಂಡಲಿಯು, ತನ್ನ ಸಭೆಗಳ ಕಾರ್ಯಕಲಾಪವನ್ನು ನಿರ್ವಹಿಸುವ ಬಗ್ಗೆ (ಅಂತಹ ಸಭೆಗಳಲ್ಲಿ ಕೋರಂನ್ನೂ ಒಳಗೊಂಡಂತೆ) ವಿನಿಯಮನಗಳ ಮೂಲಕ ಉಪಬಂಧಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅಂತಹ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು:

ಪರಂತು, ಪ್ರತೀ ವರ್ಷ ಆರಕ್ಕಿಂತ ಕಡಿಮೆ ಸಭೆಗಳನ್ನು ನಡೆಸತಕ್ಕದ್ದಲ್ಲ, ಆದರೆ ಒಂದು ಸಭೆಯ ಮತ್ತು ಮತ್ತೊಂದು ಸಭೆಯ ನಡುವೆ ಮೂರು ತಿಂಗಳುಗಳ ಅಂತರವಿರತಕ್ಕದ್ದಲ್ಲ.

(2) ಸದಸ್ಯನು, ಅಧ್ಯಕ್ಷನ ಅನುಮತಿಯಿಲ್ಲದೆ ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ, ತನ್ನ ಪದವನ್ನು ತೆರವುಗೊಳಿಸಿದ್ದಾನೆಂದು ಭಾವಿಸತಕ್ಕದ್ದು.

(3) ಅಧ್ಯಕ್ಷನು ಮಂಡಲಿಯ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅವನು ಯಾವುದೇ ಕಾರಣದಿಂದ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಕಾರ್ಯನಿರ್ವಾಹಕ ಸದಸ್ಯನು ಮತ್ತು ಅವರಿಬ್ಬರು ಗೈರು ಹಾಜರಾದಲ್ಲಿ, ಅಂತಹ ಸಭೆಯಲ್ಲಿ ಹಾಜರಿರುವ ಸದಸ್ಯರು ಚುನಾಯಿಸಿದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(4) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು, ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು, ಸಮಸಮವಾಗಿ ಮತಗಳು ಬಂದ ಪಕ್ಷದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು, ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

**9. ನಿಗಮದ ಅಧಿಕಾರಿಗಳು ಮತ್ತು ಇತರ ನೌಕರರು.–** (1) ನಿಯಮಿಸಬಹುದಾದಂತಹ ನಿಯಂತ್ರಣ, ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ನಿಗಮವು, ನೌಕರಿಭರ್ತಿ ಮಂಡಲಿಯೊಂದಿಗೆ ಸಮಾಲೋಚಿಸಿದ ನಂತರ, ಮಹಾನಿರ್ದೇಶಕನನ್ನು (ಆಕಾಶವಾಣಿ), ಮಹಾನಿರ್ದೇಶಕನನ್ನು (ದೂರದರ್ಶನ) ಮತ್ತು ಅವಶ್ಯವೆನಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಬಹುದು.

(2) ಅಂಥ ಅಧಿಕಾರಿಗಳ ಮತ್ತು ನೌಕರರ ನೌಕರಿಭರ್ತಿಯ ವಿಧಾನ ಮತ್ತು ಅದಕ್ಕೆ ಸಂಬಂಧಿಸಿದ ಇತರ ಎಲ್ಲ ವಿಷಯಗಳು ಮತ್ತು ಅಂಥ ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ಷರತ್ತುಗಳು ವಿನಿಯಮನಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

**10. ನೌಕರಿಭರ್ತಿ ಮಂಡಲಿಗಳ ಸ್ಥಾಪನೆ.–** (1) ನಿಗಮವು, ಗೊತ್ತುಪಡಿಸಿದ ದಿನದ ನಂತರ, ಸಾಧ್ಯವಾಗಬಹುದಾದಷ್ಟು ಬೇಗನೆ, ಮತ್ತು ನಿಯಮಿಸ್ತಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, 9ನೇ ಪ್ರಕರಣದ ಉದ್ದೇಶಗಳಿಗಾಗಿ, ನಿಗಮದ ಸದಸ್ಯರನ್ನು, ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಹೊರತುಪಡಿಸಿ ಪೂರ್ಣವಾಗಿ ಇತರ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ಅಥವಾ ಹೆಚ್ಚು ನೌಕರಿಭರ್ತಿ ಮಂಡಲಿಗಳನ್ನು ಸ್ಥಾಪಿಸತಕ್ಕದ್ದು:

ಪರಂತು, ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಯ ವೇತನ ಶ್ರೇಣಿಗಿಂತ ಕಡಿಮೆಯಲ್ಲದ ವೇತನ ಶ್ರೇಣಿಯುಳ್ಳ ಹುದ್ದೆಗಳಿಗೆ ನೇಮಕ ಮಾಡುವ ಉದ್ದೇಶಗಳಿಗಾಗಿ, ನೌಕರಿಭರ್ತಿ ಮಂಡಲಿಯು, ಅಧ್ಯಕ್ಷನನ್ನು, ಇತರ ಸದಸ್ಯರನ್ನು, ಪದನಿಮಿತ್ತ ಸದಸ್ಯರನ್ನು, ನಾಮನಿರ್ದೇಶಿತ ಸದಸ್ಯರನ್ನು ಮತ್ತು ಚುನಾಯಿತ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) ರಚಿತವಾಗಿರುವ ನೌಕರಿ ಭರ್ತಿ ಮಂಡಲಿಯ ಸದಸ್ಯರ ವಿದ್ಯಾರ್ಹತೆಗಳು ಮತ್ತು ಇತರ ಸೇವಾ ಷರತ್ತುಗಳು ಮತ್ತು ಅಂತಹ ಸದಸ್ಯರು ಯಾವ ಅವಧಿಗಾಗಿ ಪದಧಾರಣ ಮಾಡತಕ್ಕದ್ದೋ ಆ ಅವಧಿಯು ನಿಯಮಿಸಬಹುದಾದಂತೆ ಇರತಕ್ಕದ್ದು.

**11. ಅಧಿಕಾರಿಗಳ ಮತ್ತು ನೌಕರರ ಸ್ಥಾನಮಾನ.–** (1) ಗೊತ್ತುಪಡಿಸಿದ ದಿನಕ್ಕೂ ಮುಂಚೆ ಆಕಾಶವಾಣಿ ಅಥವಾ ದೂರದರ್ಶನದ ಉದ್ದೇಶಕ್ಕಾಗಿ ನೇಮಕಾತಿಯಾಗಿದ್ದ ಮತ್ತು 2000ರ ಏಪ್ರಿಲ್, 1 ರಂದು ಇದ್ದಂತೆ ನಿಗಮದಲ್ಲಿ ಸೇವೆಯಲ್ಲಿರುವ ಎಲ್ಲ ಅಧಿಕಾರಿಗಳನ್ನು ಮತ್ತು ನೌಕರರನ್ನು 2000ರ ಏಪ್ರಿಲ್, 1 ರಿಂದ ಜಾರಿಗೆ ಬರುವಂತೆ ನಿಗಮದಲ್ಲಿ ಪ್ರತಿನಿಯೋಜನೆ ಮೇಲಿದ್ದಾರೆಂದು ಭಾವಿಸತಕ್ಕದ್ದು ಮತ್ತು ಅವರ ವಯೋನಿವೃತ್ತಿಯವರೆಗೆ ಅವರು ಹಾಗೆ ಮುಂದುವರೆಯತಕ್ಕದ್ದು.

(2) ಗೊತ್ತುಪಡಿಸಿದ ದಿನದಂದು ಅಥವಾ ತರುವಾಯ 2007ರ ಅಕ್ಟೋಬರ್, 5ನೇ ದಿನದವರೆಗಿನ ಕಾಲಾವಧಿಯಲ್ಲಿ ನೇಮಕಾತಿಯಾಗಿದ್ದ ಎಲ್ಲ ಅಧಿಕಾರಿಗಳನ್ನು ಮತ್ತು ನೌಕರರನ್ನು, 2000ರ ಏಪ್ರಿಲ್, 1ರಿಂದ ಅಥವಾ ನಿಗಮದ ಸೇವೆಗೆ ಅವರು ಸೇರಿದ ದಿನಾಂಕದಿಂದ ಜಾರಿಗೆ ಬರುವಂತೆ ಇದರಲ್ಲಿ ಯಾವುದು ನಂತರವೋ ಅಲ್ಲಿಂದ ಮತ್ತು ಅವರ ವಯೋನಿವೃತ್ತಿಯವರೆಗೆ ಅವರು ನಿಗಮದ ಪ್ರತಿನಿಯೋಜನೆ ಮೇಲಿದ್ದಾರೆಂದು ಭಾವಿಸತಕ್ಕದ್ದು.

**ವಿವರಣೆ.–** ಉಪ ಪ್ರಕರಣಗಳು (1)ರ ಮತ್ತು (2)ರ ಉದ್ದೇಶಕ್ಕಾಗಿ, "ನೇಮಕಾತಿಗೊಂಡಿದ್ದ ಅಧಿಕಾರಿಗಳು ಮತ್ತು ನೌಕರರು" ಎಂದರೆ, ಸಂವಿಧಾನದ 309ನೇ ಅನುಚ್ಛೇದದ ಪರಂತುಕದ ಅಡಿಯಲ್ಲಾಗಲಿ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳಿಗನುಸಾರವಾಗಿಯಾಗಲಿ ನೇಮಕಾತಿಗೊಂಡಿದ್ದ ಅಧಿಕಾರಿಗಳು ಮತ್ತು ನೌಕರರು. ಆದರೆ, ದಿನಗೂಲಿ, ಸಾಂದರ್ಭಿಕ, ಅಡ್‌–ಹಾಕ್ ಅಥವಾ ವರ್ಕ್ ಚಾರ್ಜ್‌ಡ್ ಆಧಾರದ ಮೇಲೆ ಪ್ರತಿನಿಯೋಜಿಸಿಕೊಂಡಿದ್ದ ಅಥವಾ ನೇಮಕಗೊಂಡಿದ್ದ ವ್ಯಕ್ತಿಗಳು ಇದರಲ್ಲಿ ಒಳಗೊಳ್ಳತಕ್ಕದ್ದಲ್ಲ.

(3) ಉಪ–ಪ್ರಕರಣ (1)ರಲ್ಲಿ ಮತ್ತು ಉಪ–ಪ್ರಕರಣ (2)ರಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳು ಮತ್ತು ನೌಕರರು, ಕೇಂದ್ರ ಸರ್ಕಾರದ ನೌಕರನಿಗೆ ಅನ್ವಯವಾಗಬಹುದಾದಂಥ ವೇತನಕ್ಕೆ ಮತ್ತು ಎಲ್ಲ ಇತರ ಪ್ರಯೋಜನಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು:

ಪರಂತು, ಅಂಥ ಅಧಿಕಾರಿಗಳು ಮತ್ತು ನೌಕರರು, ಯಾವುದೇ ಪ್ರತಿನಿಯೋಜನೆಯ ಭತ್ಯೆಗೆ ಹಕ್ಕುಳ್ಳವರಾಗಿರತಕ್ಕದ್ದಲ್ಲ.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ನಿಗಮವು ಉಪ-ಪ್ರಕರಣ (1)ರಲ್ಲಿ ಮತ್ತು ಉಪ ಪ್ರಕರಣ (2)ರಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳ ಮತ್ತು ನೌಕರರ ಮೇಲೆ ಶಿಸ್ತು ಮತ್ತು ಮೇಲ್ವಿಚಾರಣಾ ಅಧಿಕಾರಗಳನ್ನು ಮತ್ತು ಸಂಪೂರ್ಣ ನಿಯಂತ್ರಣವನ್ನು ಹೊಂದಿರತಕ್ಕದ್ದು, ಒಂದು ಸ್ಥಳದಿಂದ, ಹುದ್ದೆಯಿಂದ ಅಥವಾ ಮಾಧ್ಯಮದಿಂದ ಮತ್ತೊಂದಕ್ಕೆ ವರ್ಗಾವಣೆ ಮಾಡುವ ಮತ್ತು ಅಮಾನತ್ತುಗೊಳಿಸುವ ಅಧಿಕಾರವನ್ನು ಒಳಗೊಂಡು ಶಿಸ್ತು ವ್ಯವಹರಣೆಗಳನ್ನು ಪ್ರಾರಂಭಿಸುವ ಮತ್ತು ದೊಡ್ಡ ಮತ್ತು ಚಿಕ್ಕ ದಂಡನೆಗಳನ್ನು ವಿಧಿಸುವ ಅಧಿಕಾರವನ್ನು ಒಳಗೊಂಡಿರತ್ಕದ್ದು:

ಪರಂತು, ಕೇಂದ್ರ ಸರ್ಕಾರವು, ಸೇವೆಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸುವ, ತೆಗೆದುಹಾಕುವ ಅಥವಾ ವಜಾಗೊಳಿಸುವ ಮುಖ್ಯ ದಂಡನೆಗಳನ್ನು ವಿಧಿಸುವ ಅಧಿಕಾರವನ್ನು ಚಲಾಯಿಸತಕ್ಕದ್ದು.

(5) 2007ರ ಅಕ್ಟೋಬರ್, 5ರ ತರುವಾಯ ನೇಮಕಾತಿಗೊಂಡಿದ್ದ ಎಲ್ಲ ಅಧಿಕಾರಿಗಳು ಮತ್ತು ನೌಕರರು, ನಿಗಮದ ಅಧಿಕಾರಿಗಳಾಗಿರತಕ್ಕದ್ದು ಮತ್ತು ನೌಕರರಾಗಿರತಕ್ಕದ್ದು ಮತ್ತು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ಸೇವಾ ಷರತ್ತುಗಳು ಅನ್ವಯವಾಗತಕ್ಕದ್ದು.

**11ಎ. ಕೆಲವು ಅಧಿಕಾರಿಗಳಿಗೆ ಮತ್ತು ನೌಕರರಿಗೆ 11ನೆಯ ಪ್ರಕರಣವು ಅನ್ವಯವಾಗತಕ್ಕದ್ದಲ್ಲ.**– (1) ಪ್ರಕರಣ 11ರ ಉಪಬಂಧಗಳು, ಭಾರತೀಯ ಮಾಹಿತಿ ಸೇವೆಯಲ್ಲಿ, ಕೇಂದ್ರ ಸಚಿವಾಲಯ ಸೇವೆಯಲ್ಲಿ ಅಥವಾ ಆಕಾಶವಾಣಿ ಅಥವಾ ದೂರದರ್ಶನದ ವೃಂದದ ಹೊರಗಿನ ಯಾವುದೇ ವೃಂದದಲ್ಲಿ ಯಾವುದೇ ಇತರ ಸೇವೆಯಲ್ಲಿ ಗೊತ್ತುಪಡಿಸಿದ ದಿನಕ್ಕೆ ಮುಂಚೆ ಆಕಾಶವಾಣಿಯಲ್ಲಿ ಅಥವಾ ದೂರದರ್ಶನದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಥವಾ ಆ ದಿನದ ತರುವಾಯ ನಿಗಮದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅನ್ವಯವಾಗತಕ್ಕದ್ದಲ್ಲ.

(2) ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿರುವ ನಿಗಮದ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿರ್ದಿಷ್ಟಪಡಿಸಿರಬಹುದಾದಂತಿರತಕ್ಕದ್ದು.

**11ಬಿ. ಆಕಾಶವಾಣಿ ಮತ್ತು ದೂರದರ್ಶನದ ಹುದ್ದೆಗಳನ್ನು ನಿಗಮಕ್ಕೆ ವರ್ಗಾವಣೆ ಮಾಡುವುದು.**– (1) ಉಪ-ಪ್ರಕರಣ (2)ರಲ್ಲಿ ಉಲ್ಲೇಖಿಸಿರುವ ಕೇಡರ್‌ಗಳ ಸಂಖ್ಯೆಯಲ್ಲಿ ಒಳಗೊಂಡಿರುವ ಹುದ್ದೆಗಳನ್ನು ಹೊರತುಪಡಿಸಿ ಆಕಾಶವಾಣಿ ಮತ್ತು ದೂರದರ್ಶದಲ್ಲಿನ ಈ ಮುಂಚಿನ ಎಲ್ಲ ಹುದ್ದೆಗಳನ್ನು 2000ರ ಏಪ್ರಿಲ್, 1ನೇ ದಿನದಿಂದ ಜಾರಿಗೆ ಬರುವಂತೆ ನಿಗಮಕ್ಕೆ ವರ್ಗಾವಣೆ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(2) ಭಾರತೀಯ ಮಾಹಿತಿ ಸೇವೆಯ, ಕೇಂದ್ರ ಸಚಿವಾಲಯದ ಸೇವೆಯ ಸೇವಾ ವೃಂದಗಳ ಅಥವಾ ಆಕಾಶವಾಣಿ ಅಥವಾ ದೂರದರ್ಶನದ ವೃಂದದ ಹೊರಗಿನ ಯಾವುದೇ ಕೇಡರ್ ಸಂಖ್ಯೆಯಲ್ಲಿ ಒಳಗೊಂಡಿರುವ ಹುದ್ದೆಗಳಿಗೆ ಸಂಬಂಧಪಟ್ಟಂಥ ಎಲ್ಲ ವಿಷಯಗಳನ್ನು, ನಿಗಮಕ್ಕೆ ಅಂಥ ಹುದ್ದೆಗಳು ಸಂಬಂಧಪಡುವಷ್ಟರ ಮಟ್ಟಿಗೆ, ನಿಯಮಿಸಬಹುದಾದಂಥ ರೀತಿಯಲ್ಲಿ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

**12. ನಿಗಮದ ಪ್ರಕಾರ್ಯಗಳು ಮತ್ತು ಅಧಿಕಾರಗಳು.**– (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಸಾರ್ವಜನಿಕರಿಗೆ ಮಾಹಿತಿ ನೀಡಲು, ಶಿಕ್ಷಣ ಒದಗಿಸಲು ಮತ್ತು ಮನರಂಜನೆ ಒದಗಿಸಲು ಮತ್ತು ರೇಡಿಯೋ ಮತ್ತು ದೂರದರ್ಶನದ ಮೂಲಕ ಪ್ರಸಾರಣದ ಸಮತೋಲಿತ ಅಭಿವೃದ್ಧಿಯನ್ನು ಸಾಧಿಸುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಸಾರ್ವಜನಿಕ ಪ್ರಸಾರಣ ಸೇವೆಗಳನ್ನು ಸಂಘಟಿಸುವುದು ಮತ್ತು ನಡೆಸುವುದು ನಿಗಮದ ಪ್ರಾಥಮಿಕ ಕರ್ತವ್ಯವಾಗಿರತಕ್ಕದ್ದು.

**ವಿವರಣೆ.**– ಸಂದೇಹಗಳ ನಿವಾರಣೆಗಾಗಿ ಈ ಪ್ರಕರಣದ ಉಪಬಂಧಗಳು ಭಾರತ ಟೆಲಿಗ್ರಾಫ್ ಅಧಿನಿಯಮ, 1885 (1885ರ 13)ರ ಉಪಬಂಧಗಳಿಗೆ ಪೂರಕವಾಗಿರತಕ್ಕದ್ದು ಮತ್ತು ಅವುಗಳನ್ನು ಕುಂಟಿತಗೊಳಿಸುವಂತೆ ಅಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

(2) ನಿಗಮವು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಈ ಮುಂದಿನ ಉದ್ದೇಶಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು, ಎಂದರೆ:-

(ಎ) ದೇಶದ ಏಕತೆಯನ್ನು ಮತ್ತು ಅಖಂಡತೆಯನ್ನು ಮತ್ತು ಸಂವಿಧಾನದಲ್ಲಿ ನಿರೂಪಿಸಿದ ಮೌಲ್ಯಗಳನ್ನು ಎತ್ತಿಹಿಡಿಯುವುದು;

(ಬಿ) ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಸಾರ್ವಜನಿಕ ಹಿತಾಸಕ್ತಿಯ ಎಲ್ಲ ವಿಷಯಗಳ ಬಗ್ಗೆ ಮುಕ್ತವಾಗಿ, ನಿಜವಾಗಿ ಮತ್ತು ವಸ್ತುನಿಷ್ಠವಾಗಿ ಮಾಹಿತಿ ಪಡೆಯುವ ನಾಗರಿಕರ ಹಕ್ಕನ್ನು ರಕ್ಷಿಸುವುದು, ಮತ್ತು ತನ್ನದೇ ಆದ ಯಾವುದೇ ಅಭಿಪ್ರಾಯವನ್ನು ಅಥವಾ ಸಿದ್ಧಾಂತವನ್ನು ಪ್ರತಿಪಾದಿಸದೆ ಭಿನ್ನ ನಿಲುವುಗಳನ್ನೂ ಒಳಗೊಂಡಂತೆ ಮಾಹಿತಿಯನ್ನು ನಿಷ್ಪಕ್ಷಪಾತವಾಗಿ ಮತ್ತು ಸಮತೋಲಿತ ರೀತಿಯಲ್ಲಿ ಪ್ರಸ್ತುತ ಪಡಿಸುವುದು;

(ಸಿ) ಶಿಕ್ಷಣ ಕ್ಷೇತ್ರಗಳಿಗೆ ವಿಶೇಷ ಗಮನ ನೀಡುವುದು ಮತ್ತು ಸಾಕ್ಷರತೆ, ಕೃಷಿ, ಗ್ರಾಮೀಣಾಭಿವೃದ್ಧಿ, ಪರಿಸರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಪ್ರಸಾರ ಮಾಡುವುದು;

(ಡಿ) ಸೂಕ್ತ ಕಾರ್ಯಕ್ರಮಗಳನ್ನು ಪ್ರಸಾರಣ ಮಾಡುವ ಮೂಲಕ ದೇಶದ ವಿವಿಧ ಪ್ರಾಂತ್ಯಗಳ ವೈವಿಧ್ಯಮಯ ಸಂಸ್ಕೃತಿ ಮತ್ತು ಭಾಷೆಗಳಿಗೆ ಸಾಕಷ್ಟು ಪ್ರಸಾರ ಅವಕಾಶವನ್ನು ಒದಗಿಸುವುದು;

(ಇ) ಆರೋಗ್ಯಕರ ಸ್ಪರ್ಧೆ ಮತ್ತು ಕ್ರೀಡಾಮನೋಭಾವದ ಬಗ್ಗೆ ಹುಮ್ಮಸ್ಸನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕ್ರೀಡೆಗಳು ಮತ್ತು ಆಟಗಳಿಗೆ ಸಾಕಷ್ಟು ಪ್ರಸಾರ ಅವಕಾಶವನ್ನು ಒದಗಿಸುವುದು;

(ಎಫ್) ಯುವಕರ ವಿಶೇಷ ಅವಶ್ಯಕತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸೂಕ್ತ ಕಾರ್ಯ0ಕ್ರಮಗಳನ್ನು ರೂಪಿಸುವುದು;

(ಜಿ) ಮಹಿಳೆಯ ಸ್ಥಾನಮಾನಕ್ಕೆ ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಪ್ರಜ್ಞೆಯ ತಿಳಿವಳಿಕೆಯನ್ನು ಕೊಡುವುದು ಮತ್ತು ಅದಕ್ಕೆ ಉತ್ತೇಜನ ನೀಡುವುದು ಮತ್ತು ಮಹಿಳೆಯರ ಉನ್ನತಿಗೆ ವಿಶೇಷ ಗಮನವನ್ನು ನೀಡುವುದು;

(ಹೆಚ್) ಸಾಮಾಜಿಕ ನ್ಯಾಯವನ್ನು ಪ್ರೋತ್ಸಾಹಿಸುವುದು ಮತ್ತು ಶೋಷಣೆ, ಅಸಮಾನತೆ ಮತ್ತು ಅಸ್ಪೃಶ್ಯತೆ ಮುಂತಾದಂತಹ ಸಾಮಾಜಿಕ ಅನಿಷ್ಟಗಳ ಬಗ್ಗೆ ಹೋರಾಡುವುದು ಮತ್ತು ಸಮಾಜದ ದುರ್ಬಲವರ್ಗಗಳ ಕಲ್ಯಾಣವನ್ನು ವೃದ್ಧಿಪಡಿಸುವುದು;

(ಐ) ದುಡಿಯುವ ವರ್ಗಗಳ ಹಕ್ಕುಗಳನ್ನು ಸಂರಕ್ಷಿಸುವುದು ಮತ್ತು ಅವರ ಕಲ್ಯಾಣವನ್ನು ವೃದ್ಧಿಪಡಿಸುವುದು;

(ಜೆ) ಗ್ರಾಮೀಣ ಮತ್ತು ದುರ್ಬಲವರ್ಗಗಳ ಜನರ ಮತ್ತು ಗಡಿಪ್ರದೇಶಗಳಲ್ಲಿ, ಹಿಂದುಳಿದ ಅಥವಾ ದೂರದ ಪ್ರದೇಶಗಳಲ್ಲಿ ವಾಸಿಸುವ ಜನರ ಸೇವೆ ಮಾಡುವುದು;

(ಕೆ) ಅಲ್ಪಸಂಖ್ಯಾತರ ಮತ್ತು ಬುಡಕಟ್ಟು ಜನಾಂಗಗಳ ವಿಶೇಷ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕಾರ್ಯಕ್ರಮಗಳನ್ನು ಒದಗಿಸುವುದು;

(ಎಲ್) ಮಕ್ಕಳ, ಅಂಧರ, ವೃದ್ಧರ, ಅಂಗವಿಕಲರ ಮತ್ತು ಇತರ ದುರ್ಬಲ ವರ್ಗಗಳ ಜನರ ಹಿತಾಸಕ್ತಿಯನ್ನು ಸಂರಕ್ಷಿಸಲು ವಿಶೇಷ ಕ್ರಮಗಳನ್ನು ಕೈಗೊಳ್ಳುವುದು;

(ಎಂ) ಭಾರತದಲ್ಲಿನ ಭಾಷೆಗಳಲ್ಲಿ ಪರಸ್ಪರ ಸಂಪರ್ಕ ಉಂಟು ಮಾಡುವಂಥ ರೀತಿಯಲ್ಲಿ ಪ್ರಸಾರಣದ ಮೂಲಕ ರಾಷ್ಟ್ರೀಯ ಸಮಗ್ರತೆಯನ್ನು ಪ್ರೋತ್ಸಾಹಿಸುವುದು; ಮತ್ತು ಪ್ರತಿಯೊಂದು ರಾಜ್ಯದಲ್ಲಿ, ಆ ರಾಜ್ಯದ ಭಾಷೆಯಲ್ಲಿ ಪ್ರಾದೇಶಿಕ ಪ್ರಸಾರಣ ಸೇವೆಗಳ ಹಂಚಿಕೆಗೆ ಅನುಕೂಲ ಕಲ್ಪಿಸುವುದು;

(ಎನ್) ಸೂಕ್ತ ತಂತ್ರಜ್ಞಾನದ ಆಯ್ಕೆ ಮತ್ತು ಲಭ್ಯವಿರುವ ಪ್ರಸಾರಣ ತರಂಗಾಂತರಗಳ ಅತ್ಯುತ್ತಮ ಬಳಕೆಯ ಮೂಲಕ ವ್ಯಾಪಕ ಪ್ರಸಾರಣ ಕವರೇಜ್ ಅನ್ನು ಒದಗಿಸುವುದು ಮತ್ತು ಉನ್ನತ ಗುಣಮಟ್ಟದ ಗ್ರಹಿಕೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದು;

(ಓ) ರೇಡಿಯೋ ಮತ್ತು ದೂರದರ್ಶನ ಪ್ರಸಾರಣ ತಂತ್ರಜ್ಞಾನವನ್ನು ನಿರಂತರವಾಗಿ ತಹಲ್‌ವರೆಗೆ ಪರಿಷ್ಕರಿಸುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು;

(ಪಿ) ವಿವಿಧ ಹಂತಗಳಲ್ಲಿ ಪ್ರಸಾರಣದ ಹೆಚ್ಚುವರಿ ಚಾನೆಲ್‌ಗಳನ್ನು ಸ್ಥಾಪಿಸುವ ಮೂಲಕ ಪ್ರಸಾರಣ ಸೌಲಭ್ಯಗಳನ್ನು ವಿಸ್ತರಿಸುವುದು.

(3) ವಿಶೇಷವಾಗಿ, ಮತ್ತು ಮೇಲೆ ಹೇಳಿದ ಉಪಬಂದಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ನಿಗಮವು, –

(ಎ) ಕಾರ್ಯಕ್ರಮಗಳನ್ನು ನೀಡುವುದಕ್ಕೆ ಮತ್ತು ನಿರ್ಮಿಸುವುದಕ್ಕೆ ಸಾರ್ವಜನಿಕ ಸೇವೆಯೆಂದು ಪ್ರಸಾರಣವನ್ನು ನಿರ್ವಹಿಸುತ್ತಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು;

(ಬಿ) ರೇಡಿಯೋ ಮತ್ತು ದೂರದರ್ಶನಕ್ಕಾಗಿ ಸುದ್ದಿ ಸಂಗ್ರಹಣಾ ವ್ಯವಸ್ಥೆಯನ್ನು ಸ್ಥಾಪಿಸಲು;

(ಸಿ) ಪ್ರಸಾರಣಕ್ಕಾಗಿ ಕ್ರೀಡೆಗಳು ಮತ್ತು ಇತರ ಪಂದ್ಯಗಳು, ಚಲನ ಚಿತ್ರಗಳು, ಧಾರಾವಾಹಿಗಳು, ವಿಶೇಷ ಸಂದರ್ಭಗಳು, ಸಭೆಗಳು, ಸಮಾರಂಭಗಳು, ಅಥವಾ ಸಾರ್ವಜನಿಕ ಹಿತಾಸಕ್ತಿಯ ಸಂಗತಿಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಮತ್ತು ಹಕ್ಕುಗಳನ್ನು ಅಥವಾ ವಿಶೇಷ ಅಧಿಕಾರಗಳನ್ನು ಖರೀದಿ ಮಾಡುವುದಕ್ಕೆ ಅಥವಾ ಅನ್ಯಥಾ ಆರ್ಜಿಸುವುದಕ್ಕೆ ಮಾತುಕತೆ ನಡೆಸಲು ಮತ್ತು ಸೇವೆಗಳಿಗೆ ಅಂತಹ ಕಾರ್ಯಕ್ರಮಗಳನ್ನು, ಹಕ್ಕುಗಳನ್ನು ಅಥವಾ ವಿಶೇಷಾಧಿಕಾರಗಳನ್ನು ಹಂಚಿಕೆ ಮಾಡುವುದಕ್ಕೆ ಪ್ರಕ್ರಿಯೆಗಳನ್ನು ರೂಪಿಸಲು;

(ಡಿ) ರೇಡಿಯೋ, ದೂರದರ್ಶನ ಮತ್ತು ಇತರ ಸಾಮಗ್ರಿಗಳ ಗ್ರಂಥಾಲಯ ಅಥವಾ ಗ್ರಂಥಾಲಯಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು;

(ಇ) ನಿಗಮವು ತಾನು ಸೂಕ್ತವೆಂದು ಭಾವಿಸಬಹುದಾದಂತಹ ವ್ಯಕ್ತಿಗಳಿಗೆ ಮತ್ತು ಅಂತಹ ರೀತಿಯಲ್ಲಿ ಮತ್ತು ಅಂತಹ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಬಹುದಾದ ಕಾರ್ಯಕ್ರಮಗಳನ್ನು, ಶ್ರೋತೃ ವರ್ಗದ ಬಗ್ಗೆ ಸಂಶೋಧನೆಯನ್ನು, ಮಾರುಕಟ್ಟೆಯ ಅಥವಾ ತಾಂತ್ರಿಕ ಸೇವೆಯನ್ನು ಕಾಲಕಾಲಕ್ಕೆ ನಡೆಸಲು ಅಥವಾ ಆರಂಭ ಮಾಡಲು;

(ಎಫ್) ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ಇತರ ಸೇವೆಗಳನ್ನು ಒದಗಿಸಲು

– ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು.

(4) (2) ಮತ್ತು (3)ನೇ ಉಪಪ್ರಕರಣಗಳಲ್ಲಿರುವುದಾವುದೂ, ಕೇಂದ್ರ ಸರ್ಕಾರದ ಪರವಾಗಿ ಮತ್ತು ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸುಬಹುದಾದಂತಹ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಅನುಸಾರವಾಗಿ ವಿದೇಶ ಪ್ರಸಾರಣ ಸೇವೆಗಳ ನಿರ್ವಹಣೆ ಮಾಡುವುದರಿಂದ ಮತ್ತು ಕೇಂದ್ರ ಸರ್ಕಾರವು ವೆಚ್ಚಗಳನ್ನು ತುಂಬಿ ಕೊಡುವುದಕ್ಕಾಗಿ ಮಾಡಿದ ವ್ಯವಸ್ಥೆಗಳ ಆಧಾರದ ಮೇಲೆ ಭಾರತದ ಹೊರಗಿನ ಸಂಘಟನೆಗಳು ಮಾಡಿದ ಪ್ರಸಾರಣದ ಮೇಲ್ವಿಚಾರಣೆ ಮಾಡುವುದುದರಿಂದ ನಿಗಮವನ್ನು ಪ್ರತಿಬಂಧಿಸತಕ್ಕದ್ದಲ್ಲ.

(5) ಈ ಪ್ರಕರಣದಲ್ಲಿ ನಿರೂಪಿಸಿದ ಉದ್ದೇಶಗಳಿಗೆ ಉತ್ತೇಜನ ನೀಡುವುದಕ್ಕಾಗಿ ಸಾಕಷ್ಟು ಸಮಯ ದೊರಕಿಸಿ ಕೊಡಲಾಗಿದೆಯೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ಜಾಹೀರಾತಿನ ಸಂಬಂಧದಲ್ಲಿ ಪ್ರಸಾರಣ ಸಮಯದ ಗರಿಷ್ಠ ಮಿತಿಯನ್ನು ನಿರ್ಧರಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(6) ನಿಗಮವು ಈ ಪ್ರಕರಣದ ಯಾವುದೇ ಉಪಬಂಧಗಳನ್ನು ಪಾಲಿಸಲು ವಿಫಲವಾಗಿದೆ ಎಂಬ ಕಾರಣದ ಮಾತ್ರದಿಂದಲೇ ಯಾವುದೇ ಸಿವಿಲ್ ಸ್ವರೂಪದ ಹೊಣೆಗಾರಿಕೆಗೆ ಅದು ಒಳಪಡತಕ್ಕದ್ದಲ್ಲ.

(7) ನಿಗಮವು ಜಾಹೀರಾತುಗಳಿಗೆ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಮತ್ತು ವಿನಿಯಮನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾರ್ಯಕ್ರಮಗಳಿಗೆ ಫೀಜನ್ನು ಮತ್ತು ಇತರ ಸೇವಾ ಶುಲ್ಕಗಳನ್ನು ನಿರ್ಧರಿಸುವುದಕ್ಕೆ ಮತ್ತು ವಿಧಿಸುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ವಿಧಿಸಲಾದ ಮತ್ತು ಸಂಗ್ರಹಿಸಲಾದ ಫೀಜುಗಳು ಮತ್ತು ಇತರ ಸೇವಾ ಶುಲ್ಕಗಳು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಮಿತಿಗಳನ್ನು ಮೀರತಕ್ಕದ್ದಲ್ಲ.

**13. ಸಂಸದೀಯ ಸಮಿತಿ.–** (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ವಿಶೇಷವಾಗಿ, 12ನೇ ಪ್ರಕರಣದಲ್ಲಿ ನಿರೂಪಿಸಲಾದ ಉದ್ದೇಶಗಳಿಗನುಸಾರವಾಗಿ ನಿಗಮವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುತ್ತಿದೆ ಎಂಬುದನ್ನು ನೋಡಿಕೊಳ್ಳಲು ಏಕ ವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ವ್ಯವಸ್ಥೆಗನುಗುಣವಾಗಿ ಲೋಕಸಭೆಯು, ತನ್ನ ಸದಸ್ಯರ ಪೈಕಿ ಚುನಾಯಿಸಿದ ಹದಿನೈದು ಮಂದಿಯನ್ನು ಮತ್ತು ರಾಜ್ಯ ಸಭೆಯು ತನ್ನ ಸದಸ್ಯರ ಪೈಕಿ ಚುನಾಯಿಸಿದ ಏಳು ಮಂದಿಯನ್ನು ಒಳಗೊಂಡ ಸಂಸತ್ತಿನ ಇಪ್ಪತ್ತೆರಡು ಸದಸ್ಯರಿರುವ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಅದರ ಮೇಲಿನ ವರದಿಯನ್ನು ಸಂಸತ್ತಿಗೆ ಸಲ್ಲಿಸತಕ್ಕದ್ದು.

(2) ಸಮಿತಿಯು, ಲೋಕಸಭಾಧ್ಯಕ್ಷರು ಮಾಡಬಹುದಾದಂತಹ ನಿಯಮಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸತಕ್ಕದ್ದು.

**14. ಪ್ರಸಾರಣ ಪರಿಷತ್ತಿನ ಸ್ಥಾಪನೆ, ಅದರ ಸದಸ್ಯರ ಪದಾವಧಿ ಮತ್ತು ಅವರನ್ನು ತೆಗೆದುಹಾಕುವಿಕೆ, ಇತ್ಯಾದಿ.–** (1) 15ನೇ ಪ್ರಕರಣದಲ್ಲಿ ಉಲ್ಲೇಖಿಸಿದ ದೂರುಗಳನ್ನು ಸ್ವೀಕರಿಸುವುದಕ್ಕೆ ಮತ್ತು ಪರ್ಯಾಲೋಚಿಸುವುದಕ್ಕೆ ಮತ್ತು 12ನೇ ಪ್ರಕರಣದಲ್ಲಿ ನಿರೂಪಿಸಿದ ಉದ್ದೇಶಗಳಿಗೆ ಅನುಸಾರವಾಗಿ ನಿಗಮವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅದಕ್ಕೆ ಸಲಹೆ ನೀಡುವುದಕ್ಕೆ ಪ್ರಸಾರಣ ಪರಿಷತ್ತು ಎಂದು ಕರೆಯಲಾಗುವ ಪರಿಷತ್ತನ್ನು, ಗೊತ್ತುಪಡಿಸಿದ ದಿನದ ನಂತರ, ಸಾಧ್ಯವಾಗಬಹುದಾದಷ್ಟು ಬೇಗನೆ, ಅಧಿಸೂಚನೆಯ ಮೂಲಕ ಸ್ಥಾಪಿಸತಕ್ಕದ್ದು.

(2) ಪ್ರಸಾರಣ ಪರಿಷತ್ತು,–

(i) ಭಾರತದ ರಾಷ್ಟ್ರಪತಿಯು, ಸಾರ್ವಜನಿಕ ಜೀವನದಲ್ಲಿ ಖ್ಯಾತರಾದ ವ್ಯಕ್ತಿಗಳ ಪೈಕಿಯಿಂದ ನೇಮಕ ಮಾಡಿದ ಅಧ್ಯಕ್ಷನನ್ನು ಮತ್ತು ಹತ್ತು ಇತರ ಸದಸ್ಯರನ್ನು;

(ii) ಲೋಕಸಭೆಯ ಸಭಾಧ್ಯಕ್ಷರು ನಾಮನಿರ್ದೇಶಿಸಿದ ಅದರ ಇಬ್ಬರು ಹಾಗೂ ರಾಜ್ಯಸಭೆಯ ಸಭಾಪತಿಯು ನಾಮನಿರ್ದೇಶಿಸಿದ ಅದರ ಇಬ್ಬರು ಸದಸ್ಯರೂ ಸೇರಿದಂತೆ ಸಂಸತ್ತಿನ ನಾಲ್ವರು ಸದಸ್ಯರನ್ನು

– ಒಳಗೊಂಡಿರತಕ್ಕದ್ದು.

(3) ಪ್ರಸಾರಣ ಪರಿಷತ್ತಿನ ಅಧ್ಯಕ್ಷನು ಪೂರ್ಣಕಾಲಿಕ ಸದಸ್ಯನಾಗಿರತಕ್ಕದ್ದು ಮತ್ತು ಪ್ರತಿಯೊಬ್ಬ ಇತರ ಸದಸ್ಯನು ಅರೆಕಾಲಿಕ ಸದಸ್ಯನಾಗಿರತಕ್ಕದ್ದು ಮತ್ತು ಅಧ್ಯಕ್ಷನು ಅಥವಾ ಅರೆಕಾಲಿಕ ಸದಸ್ಯನು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಂಥ ಪದವನ್ನು ಧಾರಣ ಮಾಡತಕ್ಕದ್ದು.

(4) ಪ್ರಸಾರಣ ಪರಿಷತ್ತು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅದಕ್ಕೆ ನೆರವನ್ನು ಮತ್ತು ಸಹಾಯವನ್ನು ನೀಡಲು ಅವಶ್ಯವೆಂದು ಭಾವಿಸಬಹುದಾದಂತಹ ಸಂಖ್ಯೆಯ ಪ್ರಾದೇಶಿಕ ಪರಿಷತ್ತುಗಳನ್ನು ರಚಿಸಬಹುದು.

(5) ಪ್ರಸಾರಣ ಪರಿಷತ್ತಿನ ಅಧ್ಯಕ್ಷನು ನಿಯಮಿಸಬಹುದಾದಂಥ ಸಂಬಳ ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು ಮತ್ತು ರಜೆ, ನಿವೃತ್ತ ವೇತನ (ಯಾವುದಾದರೂ ಇದ್ದರೆ), ಭವಿಷ್ಯ ನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಪ್ರಸಾರಣ ಪರಿಷತ್ತಿನ ಅಧ್ಯಕ್ಷನ ನೇಮಕದ ನಂತರ ಅವನ ಸಂಬಳವನ್ನು ಮತ್ತು ಭತ್ಯೆಗಳನ್ನು ಮತ್ತು ಸೇವಾ ಷರತ್ತುಗಳನ್ನು ಅವನಿಗೆ ಅನನುಕೂಲವಾಗುವ ಹಾಗೆ ವ್ಯತ್ಯಸ್ತಗೊಳ್ಳತಕ್ಕದ್ದಲ್ಲ.

(6) ಪ್ರಸಾರಣ ಪರಿಷತ್ತಿನ ಇತರ ಸದಸ್ಯರು ಮತ್ತು (4)ನೇ ಉಪಪ್ರಕರಣದ ಮೇರೆಗೆ ರಚಿತವಾದ ಪ್ರಾದೇಶಿಕ ಪರಿಷತ್ತುಗಳ ಸದಸ್ಯರು ನಿಯಮಿಸಬಹುದಾದಂಥ ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

15. **ಪ್ರಸಾರಣ ಪರಿಷತ್ತಿನ ಅಧಿಕಾರ ವ್ಯಾಪ್ತಿ ಮತ್ತು ಅದು ಅನುಸರಿಸಬೇಕಾದ ಕಾರ್ಯವಿಧಾನ.**– (1) ಪ್ರಸಾರಣ ಪರಿಷತ್ತು, –

(i) ನಿಗಮದ ನಿರ್ದಿಷ್ಟ ಕಾರ್ಯಕ್ರಮ ಅಥವಾ ಪ್ರಸಾರಣ ಅಥವಾ ಕಾರ್ಯನಿರ್ವಹಣೆಯು ನಿರ್ದಿಷ್ಟ ಸಂದರ್ಭಗಳಲ್ಲಿ ಅಥವಾ ಸಾಮಾನ್ಯವಾಗಿ ಯಾವ ಉದ್ದೇಶಗಳಿಗೆ ನಿಗಮವನ್ನು ಸ್ಥಾಪಿಸಲಾಗಿದೆಯೋ ಆ ಉದ್ದೇಶಗಳಿಗೆ ಅನುಸಾರವಾಗಿ ಇಲ್ಲವೆಂದು ಆರೋಪಿಸಿ ಯಾರೇ ವ್ಯಕ್ತಿಯಿಂದ ಅಥವಾ ವ್ಯಕ್ತಿಗಳ ಸಮೂಹದಿಂದ;

(ii) ನಿಗಮವು ಪ್ರಸಾರಣ ಮಾಡಿದ ಯಾವುದೇ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ (ಗೋಪ್ಯತೆಯ ಅನಗತ್ಯ ಅತಿಕ್ರಮಣ, ತಪ್ಪು ನಿರೂಪಣೆ, ವಿರೂಪತೆ ಅಥವಾ ವಸ್ತು ನಿಷ್ಠತೆಯ ಕೊರತೆ ಇವುಗಳೂ ಸೇರಿದಂತೆ) ಅನ್ಯಾಯವಾಗಿ ಅಥವಾ ಅನುಚಿತವಾಗಿ ತನ್ನನ್ನು ಬಿಂಬಿಸಿದ್ದಾರೆಂದು ಕ್ಲೇಮು ಮಾಡುವ (ನಿಗಮದ ಅಧಿಕಾರಿಯನ್ನು ಅಥವಾ ನೌಕರನನ್ನು ಹೊರತುಪಡಿಸಿ) ಯಾರೇ ವ್ಯಕ್ತಿಯಿಂದ

– ದೂರುಗಳನ್ನು ಸ್ವೀಕರಿಸತಕ್ಕದ್ದು ಮತ್ತು ಪರಿಶೀಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ದೂರನ್ನು ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ಕಾಲದೊಳಗೆ ಸಲ್ಲಿಸತಕ್ಕದ್ದು.

(3) ಪ್ರಸಾರಣ ಪರಿಷತ್ತು, ತಾನು ಸ್ವೀಕರಿಸಿದ ದೂರುಗಳ ವಿಲೇವಾರಿಗಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂತಹ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(4) ದೂರು ಪೂರ್ಣವಾಗಿ ಅಥವಾ ಭಾಗಶಃ ನ್ಯಾಯಸಮ್ಮತವಾಗಿದೆಯೆಂದು ಕಂಡುಬಂದರೆ, ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕಾರ್ಯನಿರ್ವಾಹಕ ಸದಸ್ಯನಿಗೆ ಪ್ರಸಾರಣ ಪರಿಷತ್ತು ಸಲಹೆ ನೀಡತಕ್ಕದ್ದು.

(5) ಪ್ರಸಾರಣ ಪರಿಷತ್ತಿನ ಶಿಫಾರಸ್ಸನ್ನು ಅಂಗೀಕರಿಸಲು ಕಾರ್ಯನಿರ್ವಾಹಕ ಸದಸ್ಯನು ಅಸಮರ್ಥನಾದರೆ, ಮಂಡಲಿಯು ಅದರ ಮೇಲೆ ತೀರ್ಮಾನ ತೆಗೆದುಕೊಳ್ಳಲು ಅವನು ಮಂಡಲಿಯ ಮುಂದೆ ಅಂತಹ ಶಿಫಾರಸ್ಸನ್ನು ಮಂಡಿಸತಕ್ಕದ್ದು.

(6) ಪ್ರಸಾರಣ ಪರಿಷತ್ತಿನ ಶಿಫಾರಸ್ಸನ್ನು ಅಂಗೀಕರಿಸುವುದಕ್ಕೆ ಮಂಡಲಿಯು ಸಹ ಅಸಮರ್ಥವಾದರೆ ಅದು ಅದರ ಬಗ್ಗೆ ತನ್ನ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ತದನುಸಾರವಾಗಿ ಅದನ್ನು ಪ್ರಸಾರಣ ಪರಿಷತ್ತಿಗೆ ತಿಳಿಸತಕ್ಕದ್ದು.

(7) (5) ಮತ್ತು (6)ನೇ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಪ್ರಸಾರಣ ಪರಿಷತ್ತು ಸೂಕ್ತವೆಂದು ಭಾವಿಸಿದರೆ, ಅದು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ಪರಿಷತ್ತು ಸೂಕ್ತವೆಂದು ಭಾವಿಸಬಹುದಾದಂತಹ ರೀತಿಯಲ್ಲಿ ದೂರಿಗೆ ಸಂಬಂಧಿಸಿದಂತೆ ತನ್ನ ಶಿಫಾರಸ್ಸುಗಳನ್ನು ಪ್ರಸಾರಣ ಮಾಡುವಂತೆ ನಿಗಮವನ್ನು ಅಗತ್ಯಪಡಿಸಬಹುದು.

## ಅಧ್ಯಾಯ III

### ಆಸ್ತಿ, ಹಣಕಾಸು ಮತ್ತು ಲೆಕ್ಕಪತ್ರಗಳು

16. **ಕೇಂದ್ರ ಸರ್ಕಾರದ ಕೆಲವು ಆಸ್ತಿಗಳು, ಹೊಣೆಗಾರಿಕೆಗಳು, ಇತ್ಯಾದಿಗಳನ್ನು ನಿಗಮಕ್ಕೆ ವರ್ಗಾಯಿಸುವುದು.–** ಗೊತ್ತುಪಡಿಸಲಾದ ದಿನದಿಂದ,-

(ಎ) ಆಕಾಶವಾಣಿಯ ಅಥವಾ ದೂರದರ್ಶನದ ಅಥವಾ ಅವೆರಡರ ಉದ್ದೇಶಕ್ಕಾಗಿ ಆ ದಿನದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿದ್ದ ಎಲ್ಲ ಸ್ವತ್ತು ಮತ್ತು ಆಸ್ತಿಗಳು (ರದ್ದಾಗದ ನಿಧಿಯೂ ಸೇರಿದಂತೆ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂತಹ ನಿಬಂಧನೆಗಳ ಮತ್ತು ಷರತ್ತುಗಳ ಮೇರೆಗೆ ನಿಗಮಕ್ಕೆ ವರ್ಗಾವಣೆಗೊಳ್ಳತಕ್ಕದ್ದು ಮತ್ತು ಅಂತಹ ಎಲ್ಲ ಸ್ವತ್ತು ಮತ್ತು ಆಸ್ತಿಗಳ ಪುಸ್ತಕ ಮೌಲ್ಯವನ್ನು ಕೇಂದ್ರ ಸರ್ಕಾರವು ನಿಗಮಕ್ಕೆ ಒದಗಿಸಿದ ಬಂಡವಾಳವೆಂದು ಪರಿಗೇಣಿಸತಕ್ಕದ್ದು;

(ಬಿ) ಆಕಾಶವಾಣಿಯ ಅಥವಾ ದೂರದರ್ಶನದ ಅಥವಾ ಅವೆರೆಡರ ಉದ್ದೇಶಗಳಿಗಾಗಿ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಅಂತಹ ದಿನದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರವು, ಅದರೊಂದಿಗೆ ಅಥವಾ ಅದರ ಪರವಾಗಿ ವಹಿಸಿಕೊಂಡ ಎಲ್ಲ ಸಾಲಗಳನ್ನು, ಬಾಧ್ಯತೆಗಳನ್ನು ಮತ್ತು ಹೊಣೆಗಾರಿಕೆಗಳನ್ನು, ಮಾಡಿಕೊಂಡ ಎಲ್ಲ ಕರಾರುಗಳನ್ನು ಮತ್ತು ಅದು ಮಾಡಲು ತೊಡಗಿದ ಎಲ್ಲ ಕಾರ್ಯಗಳನ್ನು ನಿಗಮವು, ನಿಗಮದೊಂದಿಗೆ ಅಥವಾ ಅದರ ಪರವಾಗಿ ವಹಿಸಲಾಗಿದೆಯೆಂದು, ಮಾಡಿಕೊಳ್ಳಲಾಗಿದೆಯೆಂದು ಮತ್ತು ಮಾಡಲು ತೊಡಗಿದೆಯೆಂದು ಭಾವಿಸತಕ್ಕದ್ದು;

(ಸಿ) ಅಂತಹ ದಿನದ ನಿಕಟಪೂರ್ವದಲ್ಲಿ ಆಕಾಶವಾಣಿಗೆ ಅಥವಾ ದೂರದರ್ಶನಕ್ಕೆ ಅಥವಾ ಅವೆರೆಡಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಬರಬೇಕಾದ ಹಣದ ಎಲ್ಲ ಮೊತ್ತವನ್ನು, ನಿಗಮಕ್ಕೆ ಬರಬೇಕಾಗಿದ್ದೆಂದು ಭಾವಿಸತಕ್ಕದ್ದು;

(ಡಿ) ಆಕಾಶವಾಣಿಗೆ ಅಥವಾ ದೂರದರ್ಶನಕ್ಕೆ ಅಥವಾ ಅವೆರೆಡಕ್ಕೆ ಸಂಬಂಧಿಸಿದ ಯಾವುದೇ ವಿಷಯಕ್ಕಾಗಿ ಅಂತಹ ದಿನದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರವು ಅಥವಾ ಕೇಂದ್ರ ಸರ್ಕಾರದ ವಿರುದ್ಧ ಹೂಡಿದ ಅಥವಾ ಹೂಡಬಹುದಾಗಿದ್ದ ಎಲ್ಲ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ನಿಗಮವು ಅಥವಾ ಅದರ ವಿರುದ್ಧ ಮುಂದುವರಿಸಬಹುದು ಅಥವಾ ಹೂಡಬಹುದು.

17. **ಕೇಂದ್ರ ಸರ್ಕಾರವು ನೀಡುವ ಅನುದಾನಗಳು, ಇತ್ಯಾದಿ.–** ಈ ಅಧಿನಿಯಮದ ಮೇರೆಗೆ ನಿಗಮವು ತನ್ನ ಪ್ರಕಾರ್ಯಗಳನ್ನು ದಕ್ಷವಾಗಿ ನಿರ್ವಹಿಸಲು ಅವಕಾಶ ಮಾಡಿಕೊಡುವ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಮಾಡಿದ ಸೂಕ್ತ ಧನ ವಿನಿಯೋಗದ ನಂತರ, –

(i) ಸಂಗ್ರಹಣಾ ವೆಚ್ಚಗಳನ್ನು ಕಳೆದು, ಪ್ರಸಾರಣ ಸ್ವೀಕಾರ ಲೈಸೆನ್ಸ್ ಫೀಜುಗಳ ಉತ್ಪತ್ತಿ, ಯಾವುದಾದರೂ ಇದ್ದರೆ, ಅವುಗಳನ್ನು; ಮತ್ತು

(ii) ಆ ಸರ್ಕಾರವು ಅಗತ್ಯವೆಂದು ಪರಿಗಣಿಸುವ ಹಣದ ಅಂಥ ಇತರ ಮೊತ್ತಗಳನ್ನು

– ಈಕ್ವಿಟಿಯ, ಸಹಾಯ ಅನುದಾನದ ಅಥವಾ ಸಾಲದ ರೂಪದಲ್ಲಿ ಪ್ರತೀ ಹಣಕಾಸು ವರ್ಷದಲ್ಲಿ ನಿಗಮಕ್ಕೆ ಸಂದಾಯ ಮಾಡತಕ್ಕದ್ದು.

18. **ನಿಗಮದ ನಿಧಿ.–** (1) ನಿಗಮವು ತನ್ನದೇ ಅದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ನಿಗಮದ ಎಲ್ಲ ಸ್ವೀಕೃತಿಗಳನ್ನು (16ನೇ ಪ್ರಕರಣದ ಮೇರೆಗೆ ನಿಗಮಕ್ಕೆ ವರ್ಗಾಯಿತವಾದ ಮೊತ್ತಗಳೂ ಸೇರಿದಂತೆ) ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ನಿಗಮವು ಮಾಡಬೇಕಾದ ಎಲ್ಲ ಸಂದಾಯಗಳನ್ನು ಅದರಿಂದ ಮಾಡತಕ್ಕದ್ದು.

(2) ನಿಧಿಗೆ ಸೇರಿದ ಎಲ್ಲ ಹಣವನ್ನು ನಿಗಮವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಒಂದು ಅಥವಾ ಹೆಚ್ಚು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಇಡತಕ್ಕದ್ದು.

(3) ನಿಗಮವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತವನ್ನು ಖರ್ಚು ಮಾಡಬಹುದು ಮತ್ತು ಅಂತಹ ಮೊತ್ತಗಳನ್ನು ನಿಗಮದ ನಿಧಿಯಿಂದ ಸಂದಾಯ ಮಾಡಬೇಕಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ರಾಷ್ಟ್ರೀಕೃತ ಬ್ಯಾಂಕು" ಎಂದರೆ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ (1970ರ 5) ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಂವಾದಿ ಹೊಸ ಬ್ಯಾಂಕು ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (1980ರ 40)ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಂವಾದಿ ಹೊಸ ಬ್ಯಾಂಕು ಎಂದು ಅರ್ಥ;

**19. ಹಣದ ಹೂಡಿಕೆ.–** ನಿಗಮವು ತನ್ನ ಹಣವನ್ನು ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಭದ್ರತಾಪತ್ರಗಳಲ್ಲಿ ಅಥವಾ ನಿಯಮಿಸಬಹುದಾದಂತಹ ಇತರ ರೀತಿಯಲ್ಲಿ ಹೂಡಬಹುದು.

**20. ನಿಗಮದ ವಾರ್ಷಿಕ ಹಣಕಾಸು ವಿವರಪಟ್ಟಿ.–** (1) ನಿಗಮವು, –

(ಎ) ನಿಗಮದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಉದ್ದೇಶಿಸಿದ ವೆಚ್ಚವನ್ನು; ಮತ್ತು

(ಬಿ) ಇತರ ವೆಚ್ಚಗಳನ್ನು ಭರಿಸುವುದಕ್ಕೆ ಕೇಂದ್ರ ಸರ್ಕಾರದಿಂದ ಬೇಕಾಗಿರುವ ಮೊತ್ತವನ್ನು; ಮತ್ತು, –

(i) ಇತರ ವೆಚ್ಚದಿಂದ ರಾಜಸ್ವ ವೆಚ್ಚವನ್ನು; ಮತ್ತು

(ii) ಯೋಜನಾ ವೆಚ್ಚದಿಂದ ಯೋಜನೇತರ ವೆಚ್ಚವನ್ನು

– ಬೇರ್ಪಡಿಸಿ ಪ್ರತ್ಯೇಕವಾಗಿ ತೋರಿಸುವ ಮುಂಬರುವ ಹಣಕಾಸು ವರ್ಷದ ವಾರ್ಷಿಕ ಹಣಕಾಸು ವಿವರಪಟ್ಟಿಯನ್ನು ಪ್ರತೀ ಹಣಕಾಸು ವರ್ಷದಲ್ಲಿ ತಯಾರಿಸತಕ್ಕದ್ದು.

(2) ವಾರ್ಷಿಕ ಹಣಕಾಸು ವಿವರಪಟ್ಟಿಯನ್ನು ಕೇಂದ್ರ ಸರ್ಕಾರವು ಮತ್ತು ನಿಗಮವು ಒಪ್ಪಬಹುದಾದಂತೆ ಅಂಥ ನಮೂನೆಯಲ್ಲಿ ತಯಾರಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಅಂತಹ ಕಾಲದಲ್ಲಿ ಅದನ್ನು ಕಳುಹಿಸತಕ್ಕದ್ದು.

**21. ನಿಗಮದ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ನಿಗಮವು ಸೂಕ್ತ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ನಿಗಮದ ಲೆಕ್ಕಪತ್ರಗಳ ಪರಿಶೋಧನೆಯನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ನಡೆಸತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ವಹಿಸಿದ ಯಾವುದೇ ವೆಚ್ಚವನ್ನು ನಿಗಮವು ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು.

(3) ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನು ಮತ್ತು ನಿಗಮದ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಪಟ್ಟಂತೆ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಹೊಂದಿರುವಂಥವೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಅಂತಹ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಒತ್ತಾಯಪಡಿಸಲು ಮತ್ತು ನಿಗಮದ ಯಾವುದೇ ಕಚೇರಿಗಳನ್ನು ಪರಿಶೀಲನೆ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಅಥವಾ ಈ ಬಗ್ಗೆ ಅವನು ನೇಮಕ ಮಾಡಿದ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ನಿಗಮದ ಲೆಕ್ಕಪತ್ರಗಳನ್ನು, ಅದರ ಮೇಲಿನ ಲೆಕ್ಕಪರಿಶೋಧನಾ

ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ವರ್ಷವರ್ಷವೂ ಕಳುಹಿಸಿಕೊಡತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

22. [ X...X...X...]

## ಅಧ್ಯಾಯ IV

### ಸಂಕೀರ್ಣ

23. **ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಸಂದರ್ಭವು ಉದ್ಭವವಾದಗಲೆಲ್ಲಾ ಕಾಲಕಾಲಕ್ಕೆ, ಭಾರತದ ಸಾರ್ವಭೌಮತೆ, ಏಕತೆ ಮತ್ತು ಅಖಂಡತೆಯ ಅಥವಾ ರಾಷ್ಟ್ರದ ಭದ್ರತೆಯ ಅಥವಾ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದ ವಿಷಯದ ಮೇಲೆ ಪ್ರಸಾರಣ ಮಾಡದಿರುವಂತೆ ಅಥವಾ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ಮಹತ್ವದ ಯಾವುದೇ ವಿಷಯದ ಬಗ್ಗೆ ಪ್ರಸಾರಣವನ್ನು ಮಾಡಲು ಅಗತ್ಯಪಡಿಸುವ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಅದು ತಾನು ಅವಶ್ಯವೆಂದು ಭಾವಿಸಬಹುದಾದಂತಹ ನಿರ್ದೇಶನಗಳನ್ನು ನಿಗಮಕ್ಕೆ ನೀಡಬಹುದು.

(2) (1)ನೇ ಉಪಪ್ರಕಣದ ಮೇರೆಗೆ ಹೊರಡಿಸಿದ ನಿರ್ದೇಶನಕ್ಕನುಸಾರವಾಗಿ ನಿಗಮವು ಪ್ರಸಾರಣ ಮಾಡಿರುವಲ್ಲಿ, ಅಂತಹ ನಿರ್ದೇಶನಕ್ಕನುಸಾರವಾಗಿ ಅಂತಹ ಪ್ರಸಾರಣವನ್ನು ಮಾಡಲಾಗಿದೆ ಎಂಬ ಸಂಗತಿಯನ್ನು ಸಹ, ನಿಗಮವು ಇಚ್ಛಿಸಿದರೆ, ಅಂತಹ ಪ್ರಸಾರಣದೊಂದಿಗೆ ಪ್ರಕಟಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ನಿರ್ದೇಶನದ ಪ್ರತಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

24. **ಮಾಹಿತಿಯನ್ನು ಪಡೆಯಲು ಕೇಂದ್ರ ಸರ್ಕಾರದ ಅಧಿಕಾರ.–** ಕೇಂದ್ರ ಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದಂತಹ ಮಾಹಿತಿಯನ್ನು ಒದಗಿಸುವಂತೆ ಸರ್ಕಾರವು ನಿಗಮಕ್ಕೆ ಅಗತ್ಯಪಡಿಸಬಹುದು.

25. **ಕೆಲವು ವಿಷಯಗಳಲ್ಲಿ ಸಂಸತ್ತಿಗೆ ವರದಿ ಮಾಡುವುದು ಮತ್ತು ಮಂಡಲಿಯ ವಿರುದ್ಧ ಕ್ರಮ ತೆಗೆದುಕೊಳ್ಳುವ ಬಗ್ಗೆ ಶಿಫಾರಸ್ಸುಗಳು.–** (1) ಮಂಡಲಿಯು, 23ನೇ ಪ್ರಕರಣದ ಮೇರೆಗೆ ನೀಡಿದ ಯಾವುದೇ ನಿರ್ದೇಶನಗಳನ್ನು ಪಾಲಿಸುವಲ್ಲಿ ನಿರಂತರವಾಗಿ ತಪ್ಪಿದಲ್ಲಿ ಅಥವಾ 24ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದ ಮಾಹಿತಿಯನ್ನು ಒದಗಿಸಲು ವಿಫಲವಾದಲ್ಲಿ, ಕೇಂದ್ರ ಸರ್ಕಾರವು, ಅದರ ಬಗ್ಗೆ ವರದಿಯನ್ನು ತಯಾರಿಸಬಹುದು ಮತ್ತು ಮಂಡಲಿಯ ವಿರುದ್ಧ ತೆಗೆದುಕೊಳ್ಳಬಹುದಾದ ಯಾವುದೇ ಕ್ರಮದ ಬಗ್ಗೆ (ಮಂಡಲಿಯ ರದ್ದಿಯಾತಿಯೂ ಸೇರಿದಂತೆ) ಅದರ ಯಾವುದೇ ಶಿಫಾರಸ್ಸಿಗಾಗಿ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದನ್ನು ಮಂಡಿಸಬಹುದು.

(2) ಸಂಸತ್ತಿನ ಶಿಫಾರಸ್ಸಿನ ಮೇರೆಗೆ, ರಾಷ್ಟ್ರಪತಿಯು, ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಆರು ತಿಂಗಳುಗಳನ್ನು ಮೀರದ ಅವಧಿಗೆ ಮಂಡಲಿಯುನ್ನು ರದ್ದುಗೊಳಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ರಾಷ್ಟ್ರಪತಿಯು ಮಂಡಲಿಯನ್ನು ಏಕೆ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣ ತೋರಿಸುವಂತೆ ಮಂಡಲಿಗೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಮಂಡಲಿಯ ವಿವರಣೆಗಳು ಮತ್ತು ಆಕ್ಷೇಪಣೆಗಳು, ಯಾವುದಾದರೂ ಇದ್ದರೆ, ಅವುಗಳನ್ನು ಪರಿಶೀಲಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯು ಪ್ರಕಟವಾದ ಮೇಲೆ, –

(ಎ) ರದ್ದಿಯಾತಿಯ ದಿನಾಂಕದಿಂದ ಎಲ್ಲ ಸದಸ್ಯರು ಅಂಥ ತಮ್ಮ ಪದವನ್ನು ತೆರವುಗೊಳಿಸತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ, ಮಂಡಲಿಯು ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲ ಅಧಿಕಾರಗಳನ್ನು, ಪ್ರಕಾರ್ಯಗಳನ್ನು

ಮತ್ತು ಕರ್ತವ್ಯಗಳನ್ನು, ಈ ಅಧಿನಿಯಮದ ಮೇರೆಗೆ ಮಂಡಲಿಯನ್ನು ಪುನರ್‌ರಚಿಸುವವರೆಗೆ, ರಾಷ್ಟ್ರಪತಿಯು ನಿರ್ದೇಶಿಸಬಹುದಾದಂತಹ ವ್ಯಕ್ತಿಯು ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(4) (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯವಾದ ಮೇಲೆ, ರಾಷ್ಟ್ರಪತಿಯು ಹೊಸ ನೇಮಕಗಳ ಮೂಲಕ ಮಂಡಲಿಯನ್ನು ಪುನರ್‌ರಚಿಸಬಹುದು ಮತ್ತು (3) ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತನ್ನ ಪದವನ್ನು ತೆರವುಗೊಳಿಸಿದ್ದ ಯಾರೇ ವ್ಯಕ್ತಿಯು ಅಂತಹ ಸಂದರ್ಭದಲ್ಲಿ ನೇಮಕಕ್ಕೆ ಅನರ್ಹನಾಗಿರತಕ್ಕದ್ದಲ್ಲ:

ಪರಂತು, ರಾಷ್ಟ್ರಪತಿಯು, ರದ್ದಿಯಾತಿಯ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ, ಈ ಉಪಪ್ರಕರಣದ ಮೇರೆಗೆ ಕ್ರಮವನ್ನು ತೆಗೆದುಕೊಳ್ಳಬಹುದು.

(5) ಕೇಂದ್ರ ಸರ್ಕಾರವು (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯನ್ನು ಮತ್ತು ಈ ಪ್ರಕರಣದ ಮೇರೆಗೆ ಕೈಗೊಂಡ ಕ್ರಮದ ಬಗೆಗಿನ ಪೂರ್ಣ ವರದಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

26. **ಸದಸ್ಯನ ಪದವು ಸಂಸತ್ತಿನ ಸದಸ್ಯನನ್ನು ಅನರ್ಹಗೊಳಿಸುವುದಿಲ್ಲ.–** ಪ್ರಸಾರಣ ಪರಿಷತ್ತಿನ ಅಥವಾ 13ನೇ ಪ್ರಕರಣದ ಮೇರೆಗೆ ರಚಿತವಾದ ಸಮಿತಿಯ ಸದಸ್ಯನ ಪದವು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿರುವುದಕ್ಕೆ ಅದರ ಧಾರಕನನ್ನು ಅನರ್ಹಗೊಳಿಸುವುದಿಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

27. **ಅಧ್ಯಕ್ಷನು, ಸದಸ್ಯರು, ಮುಂತಾದವರು ಲೋಕನೌಕರರಾಗಿರುವುದು.–** ನಿಗಮದ ಅಧ್ಯಕ್ಷನನ್ನು ಮತ್ತು ಪ್ರತಿಯೊಬ್ಬ ಇತರ ಸದಸ್ಯನನ್ನು, ಪ್ರತಿಯೊಬ್ಬ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಮತ್ತು ಅದರ ಸಮಿತಿಯ ಪ್ರತಿಯೊಬ್ಬ ಸದಸ್ಯನನ್ನು ಪ್ರಸಾರಣ ಪರಿಷತ್ತಿನ ಅಧ್ಯಕ್ಷನನ್ನು ಮತ್ತು ಪ್ರತಿಯೊಬ್ಬ ಸದಸ್ಯನನ್ನು ಅಥವಾ ಪ್ರಾದೇಶಿಕ ಪರಿಷತ್ತಿನ ಅಥವಾ ನೌಕರಿಭರ್ತಿ ಮಂಡಲಿಯ ಪ್ರತಿಯೊಬ್ಬ ಸದಸ್ಯನನ್ನು ಭಾರತ ದಂಡ ಸಂಹಿತೆ (1860ರ 45)ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

28. **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳಿಗೆ ಅಥವಾ ವಿನಿಯಮನಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ನಿಗಮದ, ಅದರ ಅಧ್ಯಕ್ಷನ ಅಥವಾ ಯಾರೇ ಸದಸ್ಯನ ಅಥವಾ ಅಧಿಕಾರಿಯ ಅಥವಾ ಇತರ ನೌಕರನ ಅಥವಾ ಪ್ರಸಾರಣ ಪರಿಷತ್ತಿನ ಅಧ್ಯಕ್ಷನ ಅಥವಾ ಸದಸ್ಯನ ಅಥವಾ ಪ್ರಾದೇಶಿಕ ಪರಿಷತ್ತಿನ ಅಥವಾ ನೌಕರಿಭರ್ತಿ ಮಂಡಲಿಯ ಸದಸ್ಯನ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

29. **ನಿಗಮದ ಆದೇಶಗಳ ಮತ್ತು ಇತರ ಲಿಖಿತಗಳ ಅಧಿಪ್ರಮಾಣೀಕರಣ.–** ನಿಗಮದ ಎಲ್ಲ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಅಧ್ಯಕ್ಷನ ಅಥವಾ ಈ ಬಗ್ಗೆ ನಿಗಮವು ಅಧಿಕೃತಗೊಳಿಸಿದ ಯಾರೇ ಇತರ ಸದಸ್ಯನ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ನಿಗಮವು ಬರೆದುಕೊಟ್ಟ ಎಲ್ಲ ಇತರ ಲಿಖಿತಗಳನ್ನು ಕಾರ್ಯನಿರ್ವಾಹಕ ಸದಸ್ಯನ ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ನಿಗಮದ ಯಾರೇ ಅಧಿಕಾರಿಯ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

30. **ಅಧಿಕಾರಗಳ ಪ್ರತ್ಯಾಯೋಜನೆ.–** ನಿಗಮವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿಗಮದ ಅಧ್ಯಕ್ಷನಿಗೆ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಯಾರೇ ಇತರ ಅಧಿಕಾರಿಗೆ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಮಿತಿಗಳು, ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ತನ್ನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಪ್ರತ್ಯಾಯೋಜಿಸಬಹುದು.

**31. ವಾರ್ಷಿಕ ವರದಿ.–** (1) ನಿಗಮವು, ಪ್ರತಿಯೊಂದು ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂತಹ ಕಾಲದೊಳಗೆ ಹಿಂದಿನ ವರ್ಷದ ತನ್ನ ಕಾರ್ಯಚಟುವಟಿಕೆಗಳ (ಪ್ರಸಾರಣ ಪರಿಷತ್ತು ಮಾಡಿದ ಶಿಫಾರಸ್ಸುಗಳು ಮತ್ತು ಸಲಹೆಗಳು ಮತ್ತು ಅದರ ಬಗ್ಗೆ ತೆಗೆದುಕೊಂಡ ಕ್ರಮವೂ ಸೇರಿದಂತೆ) ಪೂರ್ಣ ಮಾಹಿತಿಯನ್ನು ನೀಡುವ ವಾರ್ಷಿಕ ವರದಿಯನ್ನು, ತಯಾರಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(2) ಪ್ರಸಾರಣ ಪರಿಷತ್ತು, ಪ್ರತಿಯೊಂದು ಕ್ಯಾಲೆಂಡರ್ ವರ್ಷದಲ್ಲಿ ಒಮ್ಮೆ ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಅಂತಹ ಕಾಲದೊಳಗೆ ಹಿಂದಿನ ವರ್ಷದ ತನ್ನ ಚಟುವಟಿಕೆಗಳ ಪೂರ್ಣ ಮಾಹಿತಿಯನ್ನು ನೀಡುವ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**32. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ: –

(ಎ) 6ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಪೂರ್ಣಕಾಲಿಕ ಸದಸ್ಯರಿಗೆ ಸಂಬಂಧಿಸಿದಂತೆ ಸಂಬಳಗಳು ಮತ್ತು ಭತ್ಯೆಗಳು ಮತ್ತು ರಜೆ, ನಿವೃತ್ತಿ ವೇತನ (ಯಾವುದಾದರೂ ಇದ್ದರೆ), ಭವಿಷ್ಯನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಸೇವಾ ಷರತ್ತುಗಳು;

(ಬಿ) 6ನೇ ಪ್ರಕರಣದ (8)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನಿಗೆ ಮತ್ತು ಅರೆಕಾಲಿಕ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಸಿ) ನಿಗಮವು, 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ನಿಯಂತ್ರಣ, ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಬಹುದೋ ಆ ನಿಯಂತ್ರಣ, ನಿರ್ಬಂಧಗಳು ಮತ್ತು ಷರತ್ತುಗಳು;

(ಡಿ) 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೌಕರಿಭರ್ತಿ ಮಂಡಲಿಯನ್ನು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಸ್ಥಾಪಿಸಬಹುದೋ ಆ ರೀತಿ ಮತ್ತು ಆ ಷರತ್ತುಗಳು ಮತ್ತು ಆ ನಿರ್ಬಂಧಗಳು;

(ಇ) 10ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೌಕರಿಭರ್ತಿ ಮಂಡಲಿಯ ಸದಸ್ಯರ ಅರ್ಹತೆಗಳು ಮತ್ತು ಇತರ ಸೇವಾ ಷರತ್ತುಗಳು ಮತ್ತು ಅವರ ಪದಾವಧಿ;

(ಎಫ್) 11ಎ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನಿಗಮದಲ್ಲಿನ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಎಫ್‌ಎಫ್) ಭಾರತೀಯ ಮಾಹಿತಿ ಸೇವೆಯ, ಕೇಂದ್ರ ಸಚಿವಾಲಯ ಸೇವೆಯ ಕೇಡರ್‌ಗಳ ಸಂಖ್ಯೆಯಲ್ಲಿ ಒಳಗೊಂಡಿರುವ ಅಥವಾ ಆಕಾಶವಾಣಿ ಅಥವಾ ದೂರದರ್ಶನದ ಹೊರಗಿನ ಯಾವುದೇ ಇತರ ವೃಂದದಲ್ಲಿರುವ ಹುದ್ದೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು 11ಬಿ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಮತ್ತು ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ನಿರ್ಧರಿಸಬೇಕೋ ಆ ರೀತಿ ಮತ್ತು ಆ ನಿಬಂಧನೆಗಳು ಮತ್ತು ಆ ಷರತ್ತುಗಳು;

(ಜಿ) 14ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಪ್ರಸಾರಣ ಪರಿಷತ್ತಿನ ಅಧ್ಯಕ್ಷನಿಗೆ ಸಂಬಂಧಿಸಿದಂತೆ ಸಂಬಳಗಳು ಮತ್ತು ಭತ್ಯೆಗಳು ಮತ್ತು ರಜೆ, ನಿವೃತ್ತಿ ವೇತನ (ಯಾವುದಾದರೂ ಇದ್ದರೆ), ಭವಿಷ್ಯನಿಧಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿದಂತೆ ಸೇವಾ ಷರತ್ತುಗಳು;

(ಹೆಚ್) 14ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ, ಪ್ರಸಾರಣ ಪರಿಷತ್ತಿನ ಇತರ ಸದಸ್ಯರಿಗೆ ಮತ್ತು ಪ್ರಾದೇಶಿಕ ಪರಿಷತ್ತುಗಳ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಐ) 19ನೇ ಪ್ರಕರಣದ ಮೇರೆಗೆ ನಿಗಮವು ಯಾವ ರೀತಿಯಲ್ಲಿ ತನ್ನ ಹಣವನ್ನು ಹೂಡಬಹುದೋ ಆ ರೀತಿ;

(ಜೆ) 21ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಯನ್ನು ತಯಾರಿಸಬೇಕೋ ಆ ನಮೂನೆ ಮತ್ತು ಆ ರೀತಿ;

(ಕೆ) ನಿಗಮವು ಮತ್ತು ಪ್ರಸಾರಣ ಪರಿಷತ್ತು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ತನ್ನ ವಾರ್ಷಿಕ ವರದಿಯನ್ನು 31ನೇ ಪ್ರಕರಣದ ಮೇರೆಗೆ ತಯಾರಿಸಬೇಕೋ ಆ ನಮೂನೆ ಮತ್ತು ಆ ಕಾಲ;

(ಎಲ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**33. ವಿನಿಯಮನಗಳನ್ನು ರಚಿಸಲು ಅಧಿಕಾರ.**– (1) ನಿಗಮವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಲ್ಲದ ವಿನಿಯಮನಗಳನ್ನು ರಚಿಸಬಹುದು.

(2) ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ವಿನಿಯಮನಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 3ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ನಿಗಮವು ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಯೊಂದಿಗೆ ಸಹವರ್ತಿಸಬಹುದಾಗಿದೆಯೋ ಆ ರೀತಿ ಮತ್ತು ಆ ಉದ್ದೇಶಗಳು;

(ಬಿ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯ ಸಭೆಗಳನ್ನು ಯಾವ ಸಮಯದಲ್ಲಿ ಮತ್ತು ಸ್ಥಳದಲ್ಲಿ ನಡೆಸಬೇಕೋ ಆ ಸಮಯ ಮತ್ತು ಆ ಸ್ಥಳ ಮತ್ತು ಅಲ್ಲಿ ಅನುಸರಿಸಬೇಕಾದ ಪ್ರಕಿಯೆ ಮತ್ತು ಮಂಡಲಿಯ ಸಭೆಯಲ್ಲಿ ಕಾರ್ಯಕಲಾಪಗಳ ನಿರ್ವಹಣೆಗಾಗಿ ಅಗತ್ಯವಾದ ಕೋರಂ;

(ಸಿ) 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಗಮದ ಅಧಿಕಾರಿಗಳ ಮತ್ತು ಇತರ ನೌಕರರ ನೌಕರಿಭರ್ತಿಯ ವಿಧಾನಗಳು ಮತ್ತು ಸೇವಾ ಷರತ್ತುಗಳು;

(ಡಿ) 11ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳು;

(ಇ) X X X X

(ಎಫ್) 12ನೇ ಪ್ರಕರಣದ (3)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ನಿಗಮವು ಒದಗಿಸಬಹುದಾದ ಸೇವೆಗಳು;

(ಜಿ) 12ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಜಾಹೀರಾತುಗಳ ಮತ್ತು ಇತರ ಕಾರ್ಯಕ್ರಮಗಳ ಸಂಬಂಧದಲ್ಲಿ ವಿಧಿಸುವ ಫೀಜುಗಳು ಮತ್ತು ಇತರ ಸೇವಾ ಶುಲ್ಕಗಳ ನಿರ್ಧರಣೆ ಮತ್ತು ವಿಧಿಸುವಿಕೆ;

(ಹೆಚ್) 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ದೂರುಗಳನ್ನು ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯೊಳಗೆ ಸಲ್ಲಿಸಬೇಕೋ ಆ ರೀತಿ ಮತ್ತು ಆ ಅವಧಿ;

(ಐ) ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಯಾವ ಇತರ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧವು ಅವಶ್ಯವೆಂದು ನಿಗಮವು ಅಭಿಪ್ರಾಯಪಡುವುದೋ, ಆ ಯಾವುದೇ ಇತರ ವಿಷಯ:

ಪರಂತು, (ಸಿ) ಖಂಡದ ಅಥವಾ (ಡಿ) ಖಂಡದ ಮೇರೆಗಿನ ವಿನಿಯಮನಗಳನ್ನು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದೇ ಮಾಡತಕ್ಕದ್ದು.

34. **ನಿಯಮಗಳನ್ನು ಮತ್ತು ವಿನಿಯಮನಗಳನ್ನು ಸಂಸತ್ತಿನ ಮುಂದೆ ಮಂಡಿಸುವುದು.**– ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮನವನ್ನು ಮಾಡಕೊಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

35. **ತೊಂದರೆಗಳನ್ನು ನಿವಾರಿಸಲು ಅಧಿಕಾರ.**– ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ತೊಂದರೆಗಳ ನಿವಾರಣೆಗಾಗಿ, ತಾನು ಅಗತ್ಯವೆಂದು ಭಾವಿಸಬಹುದಾದಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಗೊತ್ತುಪಡಿಸಿದ ದಿನದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಅಂತಹ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

******